www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–10 ಸಂಚಿಕೆ–02 ಮಾರ್ಚ್ 2016
Volume : X Issue : 02 March 2016

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಬೇತೇಲ್ ಅಂಕಣ
3 ಪ್ರಾರ್ಥನಾ ಮನವಿಗಳು
4. ಶಿಷ್ಯರಿಗೆ ಅಭಿಷೇಕ
5. ಭಕ್ತರ ಹೇಳಿಕೆಗಳು
6. ಕ್ರಿಸ್ತನಲ್ಲಿರುವ ಜೀವಿತ
7. ಸ್ಥಳೀಯ ಮತ್ತು ವಿದೇಶ ಸುದ್ಧಿ
8. ಆರೋಗ್ಯ ಸ್ವರ
9. ದೇವರಿಂದ ಎಲ್ಲವೂ ಸಾಧ್ಯ
10. ನೀತಿವಂತನ ಆಶೀರ್ವಾದಗಳು
11. ಮಹಿಳೆಯರ ಸ್ವರ
12. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ನಮ್ಮ ಬಂಡೆಯೂ, ಕೋಟೆಯೂ, ರಕ್ಷಕನು ಆಗಿರುವ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ಪ್ರಿಯ ದೇವರ ಸ್ವರ ವಾಚಕರೆಲ್ಲರಿಗೂ ನನ್ನ ವಂದನೆಗಳು.

ಕ್ರಿಸ್ತನಲ್ಲಿ ಪ್ರಿಯ ವಾಚಕರೇ, ಸತ್ಯವೇದದಲ್ಲಿ ನೋಡುವುದಾದರೆ ಹಾಗರಳು ಅನೇಕ ಹೋರಾಟಗಳಿಂದಲೂ, ದು:ಖಗಳಿಂದಲೂ, ವೇದನೆಗಳಿಂದಲೂ, ಕೈಬಿಡಲ್ಪಟ್ಟ ಅನುಭವದಲ್ಲಿ ಇದ್ದಾಗ ದೇವರನ್ನು ನೋಡಿ ಮೊರೆಯಿಟ್ಟಳು. ಅವಳ ಜೀವಿತವನ್ನು ಧ್ಯಾನಿಸಿ ನೋಡುವುದಾದರೆ ಅವಳು ಅರಣ್ಯದಲ್ಲಿ ದೇವರನ್ನು ನೋಡಿ ಮೊರೆಯಿಡುತ್ತಾಳೆ. ಪ್ರಿಯರೇ, ಲೋಕ ಪ್ರಕಾರದಲ್ಲಿ ನೋಡುವುದಾದರೆ ಅರಣ್ಯದಲ್ಲಿ ಮೊರೆಯನ್ನಾಗಲಿ, ಕಣ್ಣೀರನ್ನಾಗಲಿ ಒರೆಸುವವರು ಇರುವುದಿಲ್ಲ ಆದರೆ ನನ್ನ ದೇವರು ಸರ್ವಶಕ್ತನು ಆತನು ಎಲ್ಲರನ್ನೂ ನೋಡುವಾತನು. ಅವಳು ಈ ಪ್ರಕಾರವಾಗಿ  ನನ್ನನ್ನು ನೋಡುವಾತನನ್ನು ನಾನು ಇಲ್ಲಿಯೂ ನೋಡಿದ್ದೇನಲ್ಲಾ ಅಂದುಕೊಂಡು ತನ್ನ ಸಂಗಡ ಮಾತಾಡಿದ್ದ ಯೆಹೋವನಿಗೆ [ಎಲ್ಲವನ್ನೂ] ನೋಡುವ ದೇವರೆಂದು ಹೆಸರಿಟ್ಟಳು  . (ಆದಿ. 16:13). ನನ್ನನ್ನು ನೋಡುವಾತ ದೇವರು ಎಂದು ದೇವರನ್ನು ವರ್ಣಿಸಿ ಆತನಿಗೆಂದು ಹೆಸರಿಡುತ್ತಾಳೆ.

ಪ್ರಿಯರೇ, ಅನೇಕ ಅನುಭವಗಳನ್ನು ನಾವು ದಾಡುವಾಗ, ವೇದನೆಯಲ್ಲಿ ನಡೆಯುವಾಗ, ಒಬ್ಬಂಟಿಗವಾದ ಪರಿಸ್ಥಿತಿಯನ್ನು ಎದುರಿಸುವಾಗ ನಮ್ಮಲ್ಲಿ ಉದ್ಭವಿಸುವ ಪ್ರಶ್ನೆ ಹಾಗೂ ನಮ್ಮಲ್ಲಿ ಕಾಡುವ ಪ್ರಶ್ನೆ ಇದೇ ಆಗಿರುತ್ತದೆ. ನನ್ನ ಈ ಪರಿಸ್ಥಿತಿಯನ್ನು ಯಾರು ನೋಡಿ ನನಗೆ ಸಹಾಯ ಮಾಡುತ್ತಾರೆ, ಯಾರು ಸ್ಪಂಧಿಸುತ್ತಾರೆ, ಯಾರು ನನ್ನ ಜೀವಿತದಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾರೆಂದು ಆದರೆ ಪ್ರಿಯರೇ, ನಿಮ್ಮಲ್ಲಿ ಹೇಳುವುದೇನೆಂದರೆ ನಾವು ಸೇವಿಸುತ್ತಿರುವ ದೇವರು ಜೀವಸ್ವರೂಪನು ಆತನು ಎಲ್ಲವನ್ನು ತಿಳಿದಿರುವಾತನು ಮಾತ್ರವಲ್ಲ, ಎಲ್ಲದರಿಂದಲೂ ಬಿಡುಗಡೆ ಮಾಡುವಾತನು ಆಗಿದ್ದಾನೆ.

ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ (ಯೋಹಾ. 14:18).   ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ್ಲವೆಂದು ದೇವರು ತಾನೇ ಹೇಳಿದ್ದಾನೆ

(ಇಬ್ರಿ. 13:5). ಎಂದಿಗೂ ಕೈಬಿಡದೆ, ಎಂದಿಗೂ ತೊರೆಯದೇ ಇರುವ ದೇವರಾಗಿದ್ದಾನೆ ನಾವು ಸೇವಿಸುವಾತನು. ಆತನ ಹಸ್ತಕ್ಕೆ ನಮ್ಮ ಜೀವಿತವನ್ನು ಒಪ್ಪಿಸಿಕೊಡುವ. ದೇವರು ತಾನೇ ಎಲ್ಲವನ್ನು ಸರಿಮಾಡಿ ನಡೆಸುತ್ತಾನೆ.

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅನುದಿನದ ಜೀವಿತದಲ್ಲಿ ದೇವರ ವಾಕ್ಯವು ನಮ್ಮನ್ನು ಶುದ್ಧೀಕರಿಸಿ ಕ್ರಿಸ್ತನ ಸಾರೂಪ್ಯಕ್ಕೆ ನಡೆಸುವಂತದ್ದಾಗಿದೆ.

ii) **ಕ್ರಿಸ್ತನ ಹೆಸರು ಶುದ್ಧೀಕರಿಸುತ್ತದೆ** (1 ಕೊರಿ. 6:11). ಅನುದಿನದ ನಮ್ಮ ಜೀವಿತದಲ್ಲಿ ಕ್ರಿಸ್ತನ ಹೆಸರನ್ನು ಎಷ್ಟು ನಾವು ಉಚ್ಚರಿಸುತ್ತೇವೆ ಅಷ್ಟು ಪರಿಶುದ್ಧತೆ ನಮ್ಮಲ್ಲಿ ಬರುತ್ತದೆ. ಕಾರಣ ಯೇಸುಕ್ರಿಸ್ತನ ಹೆಸರಿಗೆ ಅಷ್ಟು ಪ್ರಭಾವವಿದೆ. "ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ ನನ್ನನ್ನು ನಡೆಸುತ್ತಾನೆ" (ಕೀರ್ತ. 23:3).

**ಯೇಸುವಿನ ಹೆಸರಿನಲ್ಲಿ ಅನೇಕ ಆಶೀರ್ವಾದಗಳಿವೆ :–**

1) ಪ್ರಾರ್ಥನೆಗೆ ಉತ್ತರ (ಯೋಹಾ. 14:14, 15:16–17, 16:23–24).

2) ರಕ್ಷಣೆ (ಅ.ಕೃ. 4:12).

3) ಅದ್ಭುತ, ಸೌಖ್ಯ, ಬಿಡುಗಡೆ, ಭದ್ರತೆ (ಮಾರ್ಕ. 16:17–18).

4) ಪಾಪ ಪರಿಹಾರ (ಅ.ಕೃ. 10:43).

5) ಅಧಿಕಾರ (ಲೂಕ. 10:18–20).

iii) ದೇವರ ಆತ್ಮನ ಮೂಲಕವಾಗಿ ಶುದ್ಧೀಕರಣ (2 ಥೆಸ. 2:13):– ರಕ್ಷಣೆ ಹೊಂದಿದಾಗ ಪರಿಶುದ್ಧಾತ್ಮನು ನಮ್ಮೊಳಗೆ ಬರುತ್ತಾನೆ. ಪರಿಶುದ್ಧಾತ್ಮನ ಅಭಿಷೇಕ ಹೊಂದಿದಾಗ ನಮ್ಮ ಮೇಲೆ ಬಂದು ನಮ್ಮನ್ನು ಆವರಿಸಿಕೊಳ್ಳುತ್ತಾನೆ. ಆ ಪರಿಶುದ್ಧಾತ್ಮನು ನಮ್ಮೊಳಗೆ ಸದಾಕಾಲ ಇರುತ್ತಾನೆ. "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು" (ಯೋಹಾ. 14:16). ನಮ್ಮೊಳಗೆ ವಾಸಿಸುವ ಪರಿಶುದ್ಧಾತ್ಮನು ಅನುದಿನವೂ ನಮ್ಮನ್ನು ಎಚ್ಚರಿಸಿ, ಅಶುದ್ಧತೆ ಕಡೆಯಿಂದ ತಿರುಗಿಸಿ ಪರಿಶುದ್ಧವಾದ ಮಾರ್ಗದಲ್ಲಿ ನಡೆಸುತ್ತಾನೆ. ತಕ್ಕ ಸಮಯದಲ್ಲಿ ನಮಗೆ ಆಲೋಚನೆಗಳನ್ನು ಕೊಡುತ್ತಾನೆ. "ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು" (ಅ.ಕೃ. 1:8).

1) **ಯೇಸುಕ್ರಿಸ್ತನ ರಕ್ತವು ನಮ್ಮನ್ನು ಶುದ್ಧೀಕರಿಸುತ್ತದೆ** :– ಒಬ್ಬ ಕ್ರೈಸ್ತ ವಿಶ್ವಾಸಿಯು ಪಾಪದಲ್ಲಿ ಬೀಳಲು ಸಾಧ್ಯವಿದೆ, ಪಾಪದಲ್ಲಿ ಜೀವಿಸಲು ಸಾಧ್ಯವಿಲ್ಲ. ಕ್ರೈಸ್ತ ವಿಶ್ವಾಸಿಗಳು ಪಾಪದಲ್ಲಿ ಬಿದ್ದಾಗ 2 ಸಂಗತಿಗಳು ನಡೆಯುತ್ತವೆ.

1) "ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪ ಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪ ಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸುಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ. ಆತನು ನಮ್ಮ ಪಾಪಗಳನ್ನು ನಿವಾರಣ ಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣ ಮಾಡುತ್ತಾನೆ" (1 ಯೋಹಾ. 2:1–2).

2) "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು. ನಾವು ಪಾಪಮಾಡಲಿಲ್ಲವೆಂದು ಹೇಳಿದರೆ ಆತನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇವೆ ಮತ್ತು ಆತನ ವಾಕ್ಯ ನಮ್ಮಲ್ಲಿ ಇಲ್ಲ" (1 ಯೋಹಾ. 1:9:10). "ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ" (1 ಯೋಹಾ. 1:7).

**ಮೇಲಿನ ವಚನಗಳಿಂದ ಕಲಿಯಬೇಕಾದ 3 ಸಂಗತಿಗಳು :–**

1) ಕ್ರೈಸ್ತ ವಿಶ್ವಾಸಿ ಪಾಪದಲ್ಲಿ ಬಿದ್ದಾಗ ಕರ್ತನಾದ ಯೇಸುಕ್ರಿಸ್ತನು ತಂದೆಯಾದ ದೇವರ ಬಳಿಯಲ್ಲಿ ಅವನಿಗಾಗಿ ವಿಜ್ಞಾಪನೆ ಮಾಡುತ್ತಾನೆ (1 ಯೋಹಾ. 2:1–2).

ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ, ದೋಷವಿಲ್ಲದವರೂ ಆಗಿರಬೇಕೆಂದು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು (ಎಫೆ. 1:4).

2) ನಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ದೇವರಲ್ಲಿ ಕ್ಷಮೆಕೇಳಬೇಕು (1 ಯೋಹಾ. 1:9–10).

3) ನಾವು ನಂತರ ಬೆಳಕಿನಲ್ಲಿ ನಡೆಯಬೇಕು (1 ಯೋಹಾ. 1:7).

3) ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿ ಬಿಡುವುದಿಲ್ಲ (ಪ್ರಕ. 3:5) :– ಅನೇಕರು ಇಂದಿನ ದಿನಗಳಲ್ಲಿ ಕಲಿಸುವಂತದ್ದು ಏನೆಂದರೆ ಒಂದು ಸಲ ಒಬ್ಬ ವ್ಯಕ್ತಿಯ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟರೆ ಮತ್ತೆ ಹೇಗೆ ಬೇಕಾದರೂ, ಪಾಪದಲ್ಲಿ ಜೀವಿಸಿದರೂ ಅವರ ಹೆಸರು ಜೀವಬಾಧ್ಯರ ಪಟ್ಟಿಯಿಂದ ಅಳಿಸಲ್ಪಡುವುದಿಲ್ಲ ಅವರು ನಿತ್ಯಜೀವಕ್ಕೆ ಬಾಧ್ಯರಾಗುತ್ತಾರೆ, ಪರಲೋಕ ರಾಜ್ಯಕ್ಕೆ ಸೇರುತ್ತಾರೆಂದು ಕಲಿಸುತ್ತಾರೆ.

ಇಲ್ಲಿ ದೇವರು ಸ್ಪಷ್ಟವಾಗಿ ತಿಳಿಸುತ್ತಾ ಇದ್ದಾನೆ ಯಾರ ಹೆಸರು ಜೀವಬಾಧ್ಯರ ಪಟ್ಟಿಯಿಂದ ಅಳಿಸಿ ಬಿಡುವುದಿಲ್ಲ ಎಂಬುದಾಗಿ.

ಪ್ರಕ. 3:2–6 ರವರೆಗೆ ಕೆಲವು ನಿಬಂಧನೆಗಳನ್ನು ಕರ್ತನು ಕೊಡುತ್ತಿದ್ದಾನೆ ಏನೆಂದರೆ ಯಾರ ಹೆಸರು ಜೀವಬಾಧ್ಯರ ಪುಸ್ತಕದಿಂದ ಅಳಿಸಿ ಬಿಡುವುದಿಲ್ಲವೆಂಬುದಾಗಿ:–

1) ಎಚ್ಚರವಾಗಿರು (ಪ್ರಕ. 3:2).

2) ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸು (ಪ್ರಕ. 3:2).

3) ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ (ಪ್ರಕ. 3:2).

4) ಆದದರಿಂದ ನೀನು ಹೊಂದಿದ ಉಪದೇಶವನ್ನೂ ಅದನ್ನು ಕೇಳಿದ ರೀತಿಯನ್ನೂ ನೆನಪಿಗೆ ತಂದುಕೊಂಡು ಅದನ್ನು ಕಾಪಾಡಿಕೋ (ಪ್ರಕ. 3:3).

5) ಮತ್ತು ದೇವರ ಕಡೆಗೆ ತಿರುಗಿಕೋ (ಪ್ರಕ. 3:3).

6) ನೀನು ಎಚ್ಚರವಾಗಿಲ್ಲದಿದ್ದರೆ ಕಳ್ಳನು ಬರುವಂತೆ ಬರುವೆನು (ಪ್ರಕ. 3:3).

7) ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವದೇ ಇಲ್ಲ (ಪ್ರಕ. 3:3).

8) ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು ಸಾರ್ದಿಸಿನೊಳಗೆ ನಿನ್ನಲ್ಲಿದ್ದಾರೆ (ಪ್ರಕ. 3:4).

9) ಅವರು ಯೋಗ್ಯರಾಗಿರುವದರಿಂದ (ಪ್ರಕ. 3:4).

10) ಶುಭ್ರವಸ್ತ್ರಗಳನ್ನು ಧರಿಸಿಕೊಂಡು ನನ್ನ ಜೊತೆಯಲ್ಲಿ ನಡೆಯುವರು (ಪ್ರಕ. 3:5).

11) ಜಯಶಾಲಿಗೆ ಹೀಗೆ ಶುಭ್ರವಸ್ತ್ರಗಳನ್ನು ಹೊದಿಸುವರು (ಪ್ರಕ. 3:5).

12) ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ (ಪ್ರಕ. 3:5).

ಜೀವಬಾಧ್ಯರ ಪುಸ್ತಕದ ಕುರಿತಾಗಿ ಸತ್ಯವೇದದಲ್ಲಿ ಯಾವ ಸ್ಥಳದಲ್ಲಿ ಉಲ್ಲೇಖ ಇದೆ ಎಂದು ಕೆಲವು ವಾಕ್ಯಗಳ ಕುರಿತು ಮಾತ್ರ ಧ್ಯಾನಿಸೋಣ :–

1) "ಕರ್ತನಲ್ಲಿ ಒಂದೇ ಮನಸ್ಸುಳ್ಳವರಾಗಿರ್ರಿಯೆಂದು ಯುವೊದ್ಯಳನ್ನೂ ಸಂತುಕೆಯನ್ನೂ ಪ್ರಬೋಧಿಸುತ್ತೇನೆ. ಸತ್ಯ ಸಯುಜನೇ, ಅವರಿಗೆ ಸಹಾಯಕನಾಗಿರಬೇಕೆಂದು ನಿನ್ನನ್ನೂ ಕೇಳಿಕೊಳ್ಳುತ್ತೇನೆ. ಅವರು ಕ್ಲೇಮೆನ್ಸ್ ಮುಂತಾದ ನನ್ನ ಜೊತೆ ಕೆಲಸದವರ ಸಹಿತವಾಗಿ ನನ್ನ ಕೂಡ ಸುವಾರ್ತೆಗೋಸ್ಕರ ಪ್ರಯಾಸಪಟ್ಟವರು. ಅವರವರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆದಿವೆ" (ಫಿಲಿ. 4:2–3).

2) "ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ" (ಲೂಕ. 10:20).

3) "ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲ ಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ" (ಇಬ್ರಿ. 12:23).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಪ್ರಿಯರೇ ದೇವರು ನಮ್ಮನ್ನು ಹೀಗೆ ಪ್ರೀತಿಸಿದ ಮೇಲೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವ ಹಂಗಿನಲ್ಲಿದ್ದೇವೆ (1 ಯೋಹಾ. 4:11).

## ಡಿಜಿಎಮ್ ಬೇತೇಲ್ ಅಂಕಣ

- ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಗುಣಮುಖರಾದ 8 ಮಂದಿಯು ತಮ್ಮ ಮನೆಗೆ ಮರಳಿ ಸೇರಿಕೊಂಡಿದ್ದಾರೆ. ಉಷಾ(ಬಿಹಾರ್), ಅರ್ಪುತಮಣಿ(ತಮಿಳುನಾಡು), ಚಿರಂಜೀವಿ(ಆಂಧ್ರಪ್ರದೇಶ), ಗೋಲು(ಮಧ್ಯಪ್ರದೇಶ), ಯಶೋಧ (ದಾವಣಗೆರೆ), ಬಾಳಪ್ಪ (ಬೆಳಗಾಂ), ಕಬೀರ್(ಸತಾರಾ), ವಿದ್ಯಾಧರ್‌ಸಾವಂತ್(ಮಹಾರಾಷ್ಟ್ರ).
- ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ಬಿಡುಗಡೆ ಹಾಗೂ ಸ್ವಸ್ಥತಾ ಕೂಟವನ್ನು ಮಾರ್ಚ್ 6ರಿಂದ 9ರವರೆಗೆ ನಡೆಸಲಾಗುವದು.
- ಸಹೋ ಸುಧೀರ್ ಹಾಗೂ ರೂತ್ ದಂಪತಿಗಳಿಗೆ ದೇವರು ದಾನವಾಗಿ ಅನುಗ್ರಹಿಸಿದ ಗಂಡು ಮಗುವಿಗೆ ರೂವೆಲ್ ಜೋಶುವಾ ಎಂದು ಹೆಸರಿಟ್ಟು ದೇವರಿಗೆ ಪ್ರತಿಷ್ಠಿಸಲಾಯಿತು.
- ದಾಂಪತ್ಯ ಜೀವಿತಕ್ಕೆ ಪ್ರವೇಶಿಸಿರುವ ನೆಲ್ಸನ್ ಲೋಬೋ ಹಾಗೂ ಶರ್ಲಿನ್ ಲೋಬೋ ಮತ್ತು ವಿಲನ್ಸ್ ಲೋಬೋ ಹಾಗೂ ಸ್ಯಾಂಡ್ರ ಲೋಬೋರವರಿಗೆ ಡಿಜಿಎಮ್ ಬೇತೇಲ್ ಸಭೆಯ ಪರವಾಗಿ ಮದುವೆಯ ಶುಭಾಯಶಗಳು.
- ಜನವರಿ 31.01.16ರಿಂದ ಫೆಬ್ರವರಿ 3ರವರೆಗೆ ನಡೆಸಲ್ಪಟ್ಟ ಕೂಟವು ಕರ್ತನ ಕೃಪೆಯಿಂದ ಅದ್ಭುತವಾಗಿ ನಡೆಯಿತು. ಈ ಕೂಟದಲ್ಲಿ ಅನೇಕರು ಭಾಗವಹಿಸಿ ಕರ್ತನಿಂದ ಆಶೀರ್ವಾದವನ್ನು ಮತ್ತು ಬಿಡುಗಡೆಯನ್ನು ಹೊಂದಿಕೊಂಡರು.

### ಪ್ರಾರ್ಥನಾ ಮನವಿಗಳು

- ದೇವರ ಸ್ವರ ಮಾಸ ಪತ್ರಿಕೆಯು ಸರಿಯಾದ ಸಮಯಕ್ಕೆ ಮುದ್ರಿತವಾಗುವುದಕ್ಕಾಗಿ, ಇದರಿಂದ ಅನೇಕರು ಆಶೀರ್ವದಿಸಲ್ಪಟ್ಟು, ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ.
- ಪರೀಕ್ಷೆ ಬರೆಯುವಂತಹ ಪ್ರತಿಯೊಂದು ಮಕ್ಕಳಿಗೆ ದೇವರು ಒಳ್ಳೆಯ ಜ್ಞಾನ, ಆರೋಗ್ಯ, ಆಸಕ್ತಿ, ನೆನಪಿನ ಶಕ್ತಿಯನ್ನು ಕೊಟ್ಟು ಉತ್ತಮವಾದ ರೀತಿಯಲ್ಲಿ ಪರೀಕ್ಷೆಯನ್ನು ಬರೆಯಲು ಕರ್ತನು ಸಹಾಯಮಾಡುವಂತೆ ಪ್ರಾರ್ಥಿಸಿರಿ.
- ಎಲ್ಲಾ ಅಪಘಾತ, ಅಕಾಲಿಕ ಮರಣದಿಂದ ದೇವ ಜನರನ್ನು ಕರ್ತನು ತಪ್ಪಿಸಿ ಕಾದು ಕಾಪಾಡುವಂತೆ ಪ್ರಾರ್ಥಿಸಿರಿ.
- ದೇವ ಸೇವಕರನ್ನು, ದೇವ ಮಕ್ಕಳನ್ನು ಹಿಂಸೆಪಡಿಸುತ್ತಿರುವ ಪ್ರತಿಯೊಂದು ವ್ಯಕ್ತಿಗಳನ್ನು ಕರ್ತನು ಸಂಧಿಸುವಂತೆ, ಅವರು ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ.
- ಬೇಸಿಗೆಗಾಲದಲ್ಲಿ ಯಾವುದೇ ಬರಗಾಲ, ನೀರಿನ, ವಿದ್ಯುತ್ತಚ್ಛಕ್ತಿಯ ಕೊರತೆಗಳು ಉಂಟಾಗದಂತೆ ಪ್ರಾರ್ಥಿಸಿರಿ.
- ದೇವ ಸೇವಕರುಗಳು ಹಾಗೂ ಪ್ರತಿಯೊಂದು ವಿಶ್ವಾಸಿಗಳು ನಂಬಿಕೆ, ಪರಿಶುದ್ಧತೆ, ರಕ್ಷಣೆಯಲ್ಲಿ ಸ್ಥಿರವಾಗಿ ನಿಲ್ಲಲು, ಸಾಕ್ಷಿಯ ಜೀವಿತವನ್ನು ಕಾಪಾಡಿಕೊಳ್ಳಲು ಕರ್ತನು ಸಹಾಯಮಾಡುವಂತೆ ಪ್ರಾರ್ಥಿಸಿರಿ.

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಯಾರ್‍ಯಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ, ಅವರು ದೇವರ ಮಕ್ಕಳು (ರೋಮ. 8:14).

# ಶಿಷ್ಯರಿಗೆ ಅಭಿಷೇಕ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

5. **ಅಭಿಷೇಕದಿಂದುಂಟಾಗುವ ಪ್ರಕಟನೆ** :– ಅಭಿಷೇಕ ಹೊಂದುವದರ ಮೂಲಕ ದೇವರ ಆತ್ಮನು ರಹಸ್ಯವನ್ನೂ ಗೂಡಾರ್ಥವನ್ನೂ ಪ್ರಕಟಿಸುತ್ತಾನೆ.

ಅಭಿಷೇಕಿಸಲ್ಪಡುವ ಮುನ್ನ ಸಾಮಾನ್ಯವಾದ ಸಾಮ್ಯಗಳನ್ನೂ ಸಹ ಅರ್ಥ ಮಾಡಿಕೊಳ್ಳಲಾರದ ಶಿಷ್ಯರು, ಅಭಿಷೇಕಿಸಲ್ಪಟ್ಟನಂತರ ದೇವಜ್ಞಾನದಿಂದ ತುಂಬಿದವರಾಗಿ ಪರಲೋಕದ ಪ್ರಕಟಣೆಗಳನ್ನು ಕುರಿತು ಮಾತನಾಡಿದರು. ಅಪೋಸ್ತಲನಾದ ಪೌಲನು ಅದನ್ನು ವಿವರಿಸುತ್ತಾ "ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು, ದೇವರ ಅಗಾಧ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯರ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ" (1 ಕೊರಿ. 2:10–13).

ಈ ವಿಶೇಷವಾದ ಅನುಭವವನ್ನು ನನ್ನ ಸ್ವಂತ ಜೀವಿತದಲ್ಲೇ ನಾನು ಅನುಭವಿಸಿದ್ದೇನೆ. ನಾನು ಅಭಿಷೇಕಿಸಲ್ಪಡುವ ಮೊದಲು ಓದಿ ತಿಳಿದುಕೊಂಡದ್ದೇ ಬೇರೆ, ಅಭಿಷೇಕದ ನಂತರ ಸತ್ಯವೇದವೇ ನನ್ನ ಮನೋಲ್ಲಾಸವಾಗಿ ಮಾರ್ಪಟ್ಟಿತು. ಪ್ರತಿಯೊಂದು ವಾಕ್ಯದಲ್ಲಿರುವ ವಿಶೇಷವಾದ ಅರ್ಥಗಳು, ಕರ್ತನ ಗೂಢಾರ್ಥಗಳನ್ನು ಪ್ರಕಟಿಸುತ್ತಿದ್ದವು. ವಚನಗಳನ್ನು ಓದುತ್ತಿರುವಾಗಲೇ, ಆತ್ಮನಾದಾತನು ವಚನದಲ್ಲಿ ಅಡಗಿರುವ ಸತ್ಯಾರ್ಥಗಳನ್ನು ಬೋಧಿಸುವದನ್ನು ಅರಿತಿದ್ದೇನೆ. ಸತ್ಯವೇದವು ಹೇಳುತ್ತದೆ, "ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವದು ಅವಶ್ಯವಿಲ್ಲ" (1 ಯೋಹಾ. 2:27).

6. **ಅಭಿಷೇಕವು ಅರುಹನ್ನು ಕೊಡುತ್ತದೆ** :– "ಆತನು ಬಂದು ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು" (ಯೋಹಾ. 16:8).

ಪವಿತ್ರಾತ್ಮನನ್ನು ಹೊಂದುವಾಗ ಮನಸ್ಸಾಕ್ಷಿಯಲ್ಲಿ ಸೂಕ್ಷ್ಮವಾದಂಥ ಅನುಭವ ಉಂಟಾಗುತ್ತದೆ. ಇದು ಪಾಪವೆಂದು ತಿಳಿಯದೆ ಮಾಡಿದಂಥ ಹಿಂದಿನ ಕಾರ್ಯಗಳು ಈಗ ಪಾಪವೆಂದು ನಮ್ಮ ಅಂತರ್ಯಕ್ಕೆ ಚೆನ್ನಾಗಿ ಹೊಳೆಯುತ್ತದೆ. ಕರ್ತನಿಗೆ ಪ್ರಿಯವಾಗಿಲ್ಲದ ಪ್ರತಿಯೊಂದು ಕಾರ್ಯವನ್ನೂ ಕುರಿತು ನಮ್ಮೊಳಗಿರುವ ಪವಿತ್ರಾತ್ಮನು ನಮಗೆ ಅರುಹನ್ನು ಹುಟ್ಟಿಸುತ್ತಲೇ ಇರುವನು.

ಪ್ರತಿಸಾರಿ ಪಾಪ ಮಾಡುವಾಗಲೂ, ಒಳಗಿರುವ ದೇವರ ಆತ್ಮನು, ಮನುಷ್ಯನ ಆತ್ಮನೊಂದಿಗೆ ಹೋರಾಡುವದು, ದೇವರೊಂದಿಗೆ ಸಂಧಾನವಾಗುವಂತೆ ನಮಗೆ ಎಚ್ಚರಿಕೆ ಕೊಡುತ್ತದೆ. ಆದ್ದರಿಂದ ಅಪೊಸ್ತಲನಾದ ಪೌಲನು "ದೇವರ ಪವಿತ್ರಾತ್ಮನನ್ನು ದು:ಖಪಡಿಸಬೇಡಿರಿ" ಎಂದು ನಮಗೆ ಎಚ್ಚರಿಕೆ ಕೊಡುತ್ತಾನೆ.

ಪಾಪವನ್ನು ಕುರಿತ ಅರುಹು ನಮಗಿಲ್ಲದಿದ್ದರೆ ಆತ್ಮ ನಂದಿಹೋಗಿದೆ ಎಂದರ್ಥ. "ಪವಿತ್ರಾತ್ಮನನ್ನು ನಂದಿಸಬೇಡಿರಿ" ಎಂದು ಸತ್ಯವೇದವು ನಮ್ಮನ್ನು ಎಚ್ಚರಿಸುತ್ತದೆ (1 ಥೆಸ. 5:19).

ಶಿಷ್ಯರು ಅಭಿಷೇಕ ಹೊಂದಿದ ಆರಂಭದ ದಿನಗಳಲ್ಲಿ ಪಾಪಮಾಡಿದಂಥ ಅನನೀಯ ಮತ್ತು ಸಫೈರಳು ಕೂಡಲೇ ಬಿದ್ದು ಸಾಯಲು ಕಾರಣವೇನು? ಆತ್ಮನಾದಾತನು ಪಾಪವನ್ನು ಕುರಿತು ಖಂಡಿಸಿ ಪಾಪದ ಅರುಹನ್ನು ಹುಟ್ಟಿಸಿದದೇ ಕಾರಣ. ಆಯುಸ್ಕಾಂತವು ಹೇಗೆ ತನ್ನ ಕಡೆಗೆ ಬರುವಂತ ಕಬ್ಬಿಣವನ್ನು ಆಕರ್ಷಿಸುತ್ತದೋ ಹಾಗೆ ಪವಿತ್ರಾತ್ಮನು, ಪಾಪವನ್ನು ಕುರಿತು ಎಚ್ಚರಿಸುತ್ತಾನೆ. ಆತ್ಮನು ಕರ್ತನೊಂದಿಗೆ ನಮ್ಮನ್ನು ಸಂಧಾನ ಪಡಿಸುವದು ಎಷ್ಟು ಮಹಿಮೆಯಾದ ಅಭಿಷೇಕವಲ್ಲವೇ.

- ಅಭಿಷೇಕ ನಾನಾ ಭಾಷೆಗಳನ್ನಾಡಿಸುವದು. ಅಭಿಷೇಕವು ವಿಶ್ವಾಸಿಗಳನ್ನು ಒಂದು ಗೂಡಿಸುತ್ತದೆ.
- ಅಭಿಷೇಕವು ನಮ್ಮನ್ನು ಸಾಕ್ಷಿಗಳನ್ನಾಗಿ ಮಾರ್ಪಡಿಸುತ್ತದೆ.
- ಅಭಿಷೇಕ ನಮ್ಮನ್ನು ಬಲಪಡಿಸುತ್ತದೆ. ಅಭಿಷೇಕವು ಪ್ರಕಟನಾವರವನ್ನು ಕೊಡುತ್ತದೆ.
- ಅಭಿಷೇಕವು ಅರುಹನ್ನು ಹುಟ್ಟಿಸುತ್ತದೆ.

*ಸಂಗ್ರಹ.*

ಆತನು ಮೋಶೆಗೆ ತನ್ನ ಮಾರ್ಗವನ್ನೂ ಇಸ್ರಾಯೇಲ್ಯರಿಗೆ
ತನ್ನ ಕೃತ್ಯಗಳನ್ನೂ ಪ್ರಕಟಿಸಿದನು (ಕೀರ್ತ. 103:7).




**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲಮಾಧ್ಯಮ ಸ್ಕೂಲ್‌ನ ನೊಂದಾವಣೆಯು ಮಾರ್ಚ್ ತಿಂಗಳಿನ 2ನೇ ವಾರದಿಂದ ಪ್ರಾರಂಭವಾಗಲಿದೆ. ಎಲ್‌ಕೆಜಿ, ಯುಕೆಜಿ ಮಕ್ಕಳ ಹೆಸರನ್ನು ನೊಂದಾಯಿಸುವವರು ಈ ಕೆಳಗಿನ ಶಾಲೆಯ ಕಛೇರಿಗೆ ಬಂದು ಹೆಸರನ್ನು ನೊಂದಾಯಿಸಿರಿ.**

ಕಛೇರಿಯ ವಿಳಾಸ :
**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಸ್ಕೂಲ್,**
ಯೇಸುಪುರ, ಶಂಕರಪುರ ಪೋಸ್ಟ್, ಇನ್ನಂಜೆ ಗ್ರಾಮ, ಉಡುಪಿ–574115.

# ಭಕ್ತರ ಹೇಳಿಕೆಗಳು :-

ನ್ಯೂಹೆಬ್ರಿಡ್ಸ್ :– ಫೆಸಿಫಿಕ್‌ನ ದ್ವೀಪಗಳಲ್ಲಿ ನ್ಯೂಹೆಬ್ರಿಡ್ಸ್ ಎಂಬ ಸ್ಥಳದಲ್ಲಿ ಮಿಷನರಿಗಳು ಬೇಕಾಗಿದ್ದಾರೆಂದು ತಿಳಿದ ಜಾನ್ ಪೇಟನ್ ತಾನು ಅಲ್ಲಿ ಸೇವೆ ಮಾಡಲು ದೇವರು ಅಪೇಕ್ಷಿಸಿರುವುದಾಗಿ ತಿಳಿದುಕೊಂಡನು. ಆತನ ಸ್ನೇಹಿತರು ಆತನನ್ನು ನಿರುತ್ಸಾಹಗೊಳಿಸಲು ಹೇಳಿದ್ದೇನೆಂದರೆ “ಜಾನ್ ನೀನು ಇಲ್ಲಿಯೇ ಕರ್ತನ ಸೇವೆ ಮಾಡು ಜನರನ್ನು ಹರಿದು ತಿನ್ನುವ ನರಭಕ್ಷಕರು ಇರುವ ಸ್ಥಳಕ್ಕೆ ನೀನೇಕೆ ಹೋಗುವಿ? ಆದರೆ ಆತನು ಕರ್ತನಾದ ಯೇಸುವನ್ನು ಸನ್ಮಾನಿಸುತ್ತಾ ಸೇವೆ ಮಾಡುತ್ತಾ ಆತನಿಗಾಗಿ ಸಾಯಲು ಅಪೇಕ್ಷಿಸಿದನು.

1858ರಲ್ಲಿ ಜಾನ್ ಮತ್ತು ಆತನ ಪತ್ನಿ ನ್ಯೂಹೆಬ್ರಿಡ್ಸ್‌ಗೆ ಹೊರಟರು. ಟ್ಯಾನಾ ಎಂಬ ಸ್ಥಳಕ್ಕೆ ಬಂದು ಅಲ್ಲಿನ ಭಾಷೆ ಕಲಿತು ಅನೇಕರನ್ನು ಕರ್ತನ ಕಡೆಗೆ ನಡೆಸಿದನು. ನಂತರ ಅವರು ಅನಿವಾ ದ್ವೀಪದಲ್ಲಿ ಸೇವೆ ಮಾಡಲು ತೀರ್ಮಾನಿಸಿದರು. ಅಲ್ಲಿ ಹೊಸ ಒಡಂಬಡಿಕೆಯನ್ನು ಪ್ರಕಟಿಸಿ ಒಂದು ಸುಂದರವಾದ ದೇವಾಲಯವನ್ನು ಕಟ್ಟಿದರು. ಅಲ್ಲಿರುವ ವಿಶ್ವಾಸಿಗಳಿಗೆಲ್ಲಾ ಅವರ ಸ್ವಂತ ಭಾಷೆಯಲ್ಲಿ ಪ್ರಥಮ ಸಂಗೀತ ಪುಸ್ತಕವನ್ನು ಕೊಟ್ಟರು. ಇದಕ್ಕಿಂತ ಹೆಚ್ಚಾಗಿ ಪೇಟನ್ ಎರಡು ಅನಾಥಾಶ್ರಮಗಳನ್ನು ಕಟ್ಟಿದರು. 1907 ಜನವರಿ ತಿಂಗಳಿನ ಮೊದಲನೇ ದಿನ ನೂರಾರು ಜನರು ಕ್ರಿಸ್ತನ ಬಳಿಗೆ ಬಂದದ್ದನ್ನು ನೋಡಿ ತನ್ನ ಕೊನೆಯ ಉಸಿರು ಇರುವವರೆಗೆ ಕರ್ತನ ಸೇವೆ ಮಾಡಿದೆನೆಂಬ ತೃಪ್ತಿಯಿಂದ ಕರ್ತನಲ್ಲಿ ನಿದ್ರೆ ಹೋದರು. ಜಾನ್ ಪೇಟನ್‌ನ ಸೇವೆಯ ಜೀವಿತವು ನಿಮ್ಮೊಳಗೆ ಪ್ರೇರಣೆಯನ್ನು ತಂದಿತೋ? ಕರ್ತನು ನಿಮಗೆ ಏನಾದರೂ ಹೇಳುತ್ತಿದ್ದಾನೋ? ಅವರಂತೆ ನೀವು ಕೂಡ ಆತ್ಮನ ಬಲದಲ್ಲಿ ಆಸಕ್ತಿ ಮತ್ತು ನಂಬಿಕೆಯಿಂದ ಕೂಡಿದ ಒಬ್ಬ ಮಿಷನರಿ ಆಗಬೇಕೆಂದು ನಿಮ್ಮನ್ನು ಕರೆಯುತ್ತಿರುವನೋ? ನೀವು ಆತನಿಗೋಸ್ಕರ ಒಬ್ಬ ಮಿಷನರಿ ಆಗಬೇಕೆಂದು ನಿಮ್ಮನ್ನು ಕರೆಯಬಲ್ಲನೋ?

**ಪಾ॥ ಜಾನ್.**

ಇಗೋ ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ,
ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ (ಇಬ್ರಿ. 10:7).

# ಕ್ರಿಸ್ತನಲ್ಲಿರುವ ಜೀವಿತ

**ವಯಸ್ಕರ ಸ್ವರ**

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಕ್ರಿಸ್ತನಲ್ಲಿರುವುದಾದರೆ ನಂಬಿಕೆಯ ಜೀವಿತವಿರುವುದು** (ಗಲಾ. 2:20). ನಾನು ಜೀವಿಸುವುದು ದೇವಕುಮಾರನ ಮೇಲಿನ ನಂಬಿಕೆಯಿಂದಲೇ ಪೌಲನು ತಿಳಿಸುತ್ತಾನೆ, "ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು" (ಇಬ್ರಿ. 10:38). ನಂಬಿಕೆಯಿಲ್ಲದವನು ಕ್ರಿಸ್ತನಲ್ಲಿರಲು ಸಾಧ್ಯವಿಲ್ಲ. ಪೌಲನು ಹೇಳುತ್ತಾನೆ, "ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" (ಗಲಾ. 2:20). ನಾವು ಸಹ ಬಹಳಷ್ಟು ಸಲ ಈ ವಾಕ್ಯವನ್ನೇ ಬಾಯಿಪಾಠ ಮಾಡಿ ಹೇಳುತ್ತಿರುತ್ತೇವೆ. ಆದರೆ ನಮಗೆ ಯಾರಾದರೂ ಬೈದರೆ, ನಿಂದಿಸಿದರೆ ಆಗ ನಾವು ನಾವಾಗಿರುವುದಿಲ್ಲ. ಆಗ ಒಳಗಡೆ ಯಾರು ಜೀವಿಸುತ್ತಾರೆ ಎಂಬುವುದು ತಿಳಿದು ಹೋಗುತ್ತೇ. ಪೌಲನು ಹೇಳುತ್ತಾನೆ, ನಾನು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡಿರುವುದರಿಂದ ಇನ್ನು ಜೀವಿಸುವುದು ನಾನಲ್ಲ ಎಂದು. ಕ್ರಿಸ್ತನಲ್ಲಿದ್ದವನು ಮಾತ್ರ ಕಡೇವರೆಗೆ ನಂಬಿಕೆಯ ಜೀವಿತವನ್ನು ಜೀವಿಸಲು ಸಾಧ್ಯ. ನಾವು ನೋಡಿ ನಡೆಯುವವರಲ್ಲ, ನಂಬಿ ನಡೆಯುವವರು ಆಗಿದ್ದೇವೆ (2 ಕೊರಿ. 5:7).

4) **ಕ್ರಿಸ್ತನಲ್ಲಿದ್ದರೆ ಫಲವನ್ನು ಕೊಡುವವರಾಗುತ್ತೇವೆ** (ಯೋಹಾ. 15:5):– "ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲವನ್ನು ಕೊಡುವನು" ದೇವರು ನಮ್ಮನ್ನು ಆರಿಸಿದ ಮುಖ್ಯ ಉದ್ದೇಶಗಳಲ್ಲೊಂದು ನಾವು ಆತನಿಗಾಗಿ ಫಲಕೊಡಬೇಕೆಂದು. "ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟು ಹೋಗಿ ಫಲಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದಾಗ ಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ" (ಯೋಹಾ. 15:16). ಫಲಕೊಡದ ಮರವನ್ನು ಆತನು ಕಡಿದು ಬಿಸಾಡುವನು. ಕೊಂಬೆಯು ಬಳ್ಳಿಯಲ್ಲಿದ್ದರೆ ಮಾತ್ರ ಆ ಕೊಂಬೆಯು ಫಲ ಕೊಡುವುದು ಅದೇ ಪ್ರಕಾರ ನಾವು ಕೊಂಬೆಗಳು ಯೇಸು ಬಳ್ಳಿಯು ಆಗಿದ್ದಾನೆ. ನಾವು ಯೇಸುವಿನಲ್ಲಿದ್ದರೆ ಮಾತ್ರ ಫಲ ಕೊಡುತ್ತೇವೆ. ಇಲ್ಲವಾದರೆ ಭೂಮಿಗೆ ಭಾರವಾಗಿರುವ ಮರದಂತಿರುತ್ತೇವೆ. ಸಾಮಾನ್ಯವಾಗಿ ಮರಗಳಲ್ಲಿ ಕೆಲವು ಮರಗಳು ಉತ್ತಮ ಫಲಗಳನ್ನೂ, ಇನ್ನು ಕೆಲವು ಕೆಟ್ಟ ಫಲವನ್ನು ಕೊಡುತ್ತವೆ. ಅದೇ ಪ್ರಕಾರ ಕೆಲವರು ಕ್ರಿಸ್ತನಲ್ಲಿ ಉತ್ತಮ ಫಲವನ್ನು ಕೊಡುತ್ತಾರೆ. ಇನ್ನು ಕೆಲವರು ಅದೇ ಹಳೆಯ ಬದಲಾಗದ ಫಲವನ್ನು ಕೊಡುವವರಾಗಿರುತ್ತಾರೆ. ಕರ್ತನು ಫಲಕೊಡದ ಮರವನ್ನು ಕಡಿದು ಬಿಸಾಡುವನು. ಆದರೆ ಫಲಕೊಡುವ ಮರವನ್ನು ಹೆಚ್ಚು ಫಲ ಕೊಡುವಂತೆ ಶುದ್ಧೀಕರಿಸುತ್ತಾನೆ. ಬೇಡವಾದ ಕೊಂಬೆಗಳನ್ನು ತುಂಡರಿಸುತ್ತಾನೆ (ಯೋಹಾ. 15:1–2). ಪ್ರಿಯ ದೇವ ಮಗುವೆ, ನೀನು ಕ್ರಿಸ್ತನಲ್ಲಿದ್ದು ಫಲಕೊಡುವಿಯಾದರೆ ಒಂದು ದಿನ ಇದಕ್ಕಾಗಿ ಬಹಳಷ್ಟು ಪ್ರತಿಫಲ ಹೊಂದುವಿ. ಕ್ರೈಸ್ತನಾಗಿದ್ದು ಲೋಕದಲ್ಲಿ ಬಿದ್ದು ಫಲಕೊಡದ ಹಾಗಿರಬೇಡಾ. ಸಾಮಾನ್ಯವಾಗಿ ದೇವರು ನಮ್ಮಿಂದ ಮೊದಲು ಎದುರು ನೋಡುವ ಫಲ ಯಾವುದೆಂದರೆ ಮಾನಸಾಂತರದ ಫಲ. "ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬದನ್ನು ತಕ್ಕ ಫಲದಿಂದ ತೋರಿಸಿರಿ" (ಮತ್ತಾ. 3:8). ಅನಂತರ ಪವಿತ್ರಾತ್ಮನ 9 ಫಲ, ಅನಂತರ ನಮ್ಮಿಂದ ಆತ್ಮ ಆದಾಯದ ಫಲಗಳನ್ನು ಎದುರು ನೋಡುತ್ತಾನೆ. ನೀನು ನಿಜವಾಗಿ ಕ್ರಿಸ್ತನಲ್ಲಿದ್ದರೆ ಈ ಫಲಗಳನ್ನು ಕೊಡಲು ಸಾಧ್ಯ ಇಲ್ಲದಿದ್ದರೆ ನಿನ್ನಿಂದ ಇದು ಅಸಾಧ್ಯವಾಗಿರುತ್ತದೆ.

5) **ಕ್ರಿಸ್ತನಲ್ಲಿದ್ದರೆ ಅಪರಾಧ ನಿರ್ಣಯವು ಇರದು** (ರೋಮ. 8:1) :– ನಾವು ಕ್ರಿಸ್ತನಲ್ಲಿರುವಾಗ ನಮ್ಮ ಪಾಪಗಳು ಕ್ಷಮಿಸಲ್ಪಡುತ್ತದೆ ಹಾಗೂ ದೇವರಿಂದ ನೀತಿವಂತರಾಗಿ ನಿರ್ಣಯಿಸಲ್ಪಡುತ್ತೇವೆ (ರೋಮ. 5:1). ಆದರೆ ಕ್ರಿಸ್ತನಲ್ಲಿರದವರು ಅಪರಾಧಿಗಳೆಂದು ನಿರ್ಣಯಿಸಲ್ಪಡುತ್ತಾರೆ ಹಾಗೂ ದಂಡನೆಯನ್ನು ಹೊಂದುವರು. ಕ್ರಿಸ್ತನಲ್ಲಿರುವವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯಬಾರದೆಂದು ದೇವರು ನಾವು ತಪ್ಪು ಮಾಡಿದ್ದಾಗ

ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ
ಭಕ್ತಿಹೀನರಿಗೋಸ್ಕರ ಪ್ರಾಣ ಕೊಟ್ಟನು (ರೋಮ. 5:6).

ನಮ್ಮನ್ನು ಶಿಕ್ಷಿಸುತ್ತಾನೆ (1 ಕೊರಿ. 11:32). ಆದರೆ ನಮಗೆ ಕರ್ತನ ನ್ಯಾಯ ವಿಚಾರಣೆಗೆ ಒಳಗಾಗಬೇಕಾಗಿದೆ. "ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿ. 5:10). ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೆ ಗುರಿಯಾಗುವುದಿಲ್ಲ (2 ಕೊರಿ. 11:30). ಪ್ರಿಯ ದೇವ ಮಗುವೆ, ನೀನು ಅರ್ಧ ಕ್ರಿಸ್ತನಲ್ಲಿ, ಅರ್ಧ ಲೋಕದಲ್ಲಿ ಇದ್ದು ಜೀವಿಸುವಿಯಾದರೆ ಮೋಸ ಹೋಗುತ್ತಿಯ? ಕ್ರಿಸ್ತನಲ್ಲಿದ್ದು ಶ್ರೇಷ್ಟ ಜೀವನವನ್ನು ಹೊಂದಿಕೊ ಹಾಗೂ ನಿತ್ಯ ಜೀವವನ್ನು ಪಡೆದುಕೋ. "ಆತನಲ್ಲಿ ಪಾಪವಿಲ್ಲ, ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡನು" (1 ಯೋಹಾ. 3:6).

**ಪಾ|| ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಖಾಸಗಿ ವಲಯದಲ್ಲಿ ಶೇ. 27 ಒಬಿಸಿ ಮೀಸಲಿಗೆ ಶಿಫಾರಸು:– ಸರ್ಕಾರಿ ಉದ್ಯೋಗದಲ್ಲಿರುವಂತೆ ಖಾಸಗಿ ಕ್ಷೇತ್ರಗಳಿಗೂ ಮೀಸಲು ಪದ್ಧತಿ ವಿಸ್ತರಿಸುವಂತೆ ಕೇಂದ್ರ ಸರ್ಕಾರದ ಶಾಸಕಾಂಗ ಸಮಿತಿಯೊಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

- ಇತರ ನೂಡಲ್ಸ್‌ಗಳಲ್ಲೂ ಹಾನಿಕಾರಕ ಅಂಶ/ನೆಸ್ಲೆಯ ಪ್ರಸಿದ್ಧ ಮ್ಯಾಗಿ ನೂಡಲ್ಸ್ ವಿವಾದ ಬಳಿಕ ಇದೀಗ ಇತರ ಕಂಪನಿಗಳ ನೂಡಲ್ಸ್‌ಗಳಲ್ಲೂ ತೀವ್ರ ಹಾನಿಕಾರಕ ಅಂಶಗಳಿರುವುದನ್ನು ಉತ್ತರಪ್ರದೇಶ ಸರ್ಕಾರದ ಆಹಾರ ಸುರಕ್ಷತಾ ಇಲಾಖೆ ಪತ್ತೆ ಹಚ್ಚಿದೆ.

- ರಾಜ್ಯದಲ್ಲಿರುವ ಎಲ್ಲಾ ಹಳೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಟ್ಟಡಗಳ ಸಮೀಕ್ಷೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

- ಭಾರತದ ಆಪ್ತರಾಗಿದ್ದ ನೇಪಾಳದ ಮಾಜಿ ಪ್ರಧಾನಿ ಸುಶೀಲ್ ಕೊಯಿರಾಲಾ (79)ರವರು 9/2/16ರಂದು ನಿಧನ ಹೊಂದಿದ್ದಾರೆ. ಫೆಬ್ರವರಿಯಿಂದ 2015ರ ಅಕ್ಟೋಬರ್‌ವರೆಗೆ ನೇಪಾಳದ ಪ್ರಧಾನಿಯಾಗಿದ್ದ ಕೊಯಿರಾಲಾ ಅವರು ಕಳೆದ ವರ್ಷ ಅಕ್ಟೋಬರ್‌ನಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ಇತ್ತೀಚೆಗೆ ಶ್ವಾಸಕೋಶದ ಕ್ಯಾನ್ಸರ್‌ನಿಂದ ಗುಣಮುಖರಾಗಿದ್ದ ಅವರು ಈಗ ನ್ಯುಮೋನಿಯಾಗೆ ತುತ್ತಾಗಿ ಅಸುನೀಗಿದ್ದಾರೆ.

- ಅಮೋಘ ಆಟದ ಪ್ರದರ್ಶನ ನೀಡಿದ ಅಗ್ರ ಶ್ರೇಯಾಂಕದ ಸಾನಿಯಾ ಮಿರ್ಜಾ ಮತ್ತು ಸ್ವಿಸ್‌ನ ಮಾರ್ಟಿನಾ ಹಿಂಗಿಸ್ ಅವರು ಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ಜೆಕ್ ಗಣರಾಜ್ಯದ ಆಂದ್ರೇಯ ಹಾವಾಸ್ಕೋವಾ ಮತ್ತು ಲೂಸೀ ಹೃದೆಕಾ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ಆಸ್ಟ್ರೇಲಿಯನ್ ಓಪನ್ ಟೆನಿಸ್ ಕೂಟದ ಮಹಿಳಾ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿ ಕೊಂಡಿದ್ದಾರೆ.

- 2001ರಲ್ಲಿ ನಡೆದಿದ್ದ ಸಂಸತ್ ಭವನದ ಮೇಲಿನ ದಾಳಿ ಪ್ರಕರಣದ ರೂವಾರಿ ಅಫ್ಜಲ್ ಗುರು ಪರ ದಿಲ್ಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು)ದಲ್ಲಿ ಪ್ರತಿಭಟನೆ ನಡೆಸಿ, ದೇಶ ವಿರೋಧಿ ಘೋಷಣೆ ಕೂಗಿದ ಪ್ರಕರಣಕ್ಕೆ ಈಗ ಹೊಸ ತಿರುವು ಸಿಕ್ಕಿದೆ.

- ಕೇಂದ್ರ ಸರಕಾರ ಮುಂದಿನ ಮೂರು ವರ್ಷಗಳಲ್ಲಿ ದೇಶದ ಎಲ್ಲ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಗುರಿ ಹೊಂದಿದ್ದು, ಉತ್ತಮ ಗುಣಮಟ್ಟಕ್ಕೆ ಮೊದಲ ಆದ್ಯತೆ ನೀಡುತ್ತಿದೆ ಎಂದು ಕೇಂದ್ರ ಇಂಧನ ಸಚಿವ ಪಿಯೂಶ್ ಗೋಯಲ್ ಹೇಳಿದ್ದಾರೆ.

- ವಾಯುಮಾಲಿನ್ಯಕ್ಕೆ ವಾರ್ಷಿಕ 55 ಲಕ್ಷ ಬಲಿ: ಹೆಚ್ಚಿನ ಸಾವು ಚೀನಾ, ಭಾರತದಲ್ಲಿ, ಮಿತಿ ಮೀರಿದ ವಾಯುಮಾಲಿನ್ಯದಿಂದಾಗಿ ಪ್ರತಿ ವರ್ಷ 55 ಲಕ್ಷ ಜನ ಅಕಾಲಿಕ ಮರಣ ಹೊಂದುತ್ತಿದ್ದಾರೆ. ಈ ಪೈಕಿ ಅತ್ಯಂತ ಹೆಚ್ಚಿನ ಸಾವು ಚೀನಾ, ಭಾರತದಲ್ಲಿ ಸಂಭವಿಸುತ್ತಿದೆ ಎಂದು ಜಾಗತಿಕ ವರದಿಯೊಂದು ತಿಳಿಸಿದೆ.

ನನ್ನ ವಿಷಯದಲ್ಲಿ ನೇಮಕವಾದದ್ದನ್ನು ಪೂರೈಸುವನಷ್ಟೆ.
ಆತನಲ್ಲಿ ಇಂಥಾ ಸಂಕಲ್ಪಗಳು ಅನೇಕವಾಗಿವೆ (ಯೋಬ. 23:14).

# ಮೆಂತ್ಯ ತಿನ್ನಿ ಆರೋಗ್ಯವಾಗಿರಿ

ಆರೋಗ್ಯ ಸ್ವರ

ಮೆಂತ್ಯ ಎಲ್ಲರಿಗೂ ಗೊತ್ತಿರುವ ಧಾನ್ಯ ಮೆಂತ್ಯಕ್ಕೆ ಆರೋಗ್ಯ ಕಾಪಾಡುವಲ್ಲಿ ವಿಶೇಷ ಸ್ಥಾನವಿದೆ. ಇದು ಪೋಷಕಾಂಶಗಳ ಆಗರ. ಮೆಂತ್ಯದಲ್ಲಿ ವಿಟಮಿನ್ 'ಸಿ' ಪೋಟಾಷಿಯಂ, ದೈಸಿನ ಇನ್ನಿತರ ಅಂಶಗಳು ಹೇರಳವಾಗಿವೆ. ದೇಹದ ಬೊಜ್ಜು ನಿಯಂತ್ರಣಕ್ಕೆ ಮೆಂತ್ಯ ರಾಮಬಾಣ. ಮೆಂತ್ಯವನ್ನು ಯಾವುದಾದರೂ ರೂಪದಲ್ಲಿ ನಿತ್ಯ ಸೇವಿಸುತ್ತಾ ಬಂದರೆ ಅದು ದೇಹದ ಕೊಲೆಸ್ಟ್ರಾಲನ್ನು ನಿಯಂತ್ರಿಸುತ್ತದೆ. ಅಷ್ಟೇ ಅಲ್ಲ, ಹೃದಯ ಸ್ತಂಭನವಾಗುವ ಅವಕಾಶ ಕಡಿಮೆ. ಇದೀಗ ಮಾತ್ರೆ ರೂಪದಲ್ಲಿ ಮೆಂತ್ಯ ಲಭ್ಯ. ಮೆಂತ್ಯಕಾಳು ಮಧುಮೇಹಿಗಳಿಗೆ ಸೇವಿಸಲು ಸಲಹೆ ನೀಡುವುದು ಸಾಮಾನ್ಯವಾಗಿದೆ. ಕಾರಣ, ಮೆಂತ್ಯ ರಕ್ತದಲ್ಲಿನ ಸಕ್ಕರೆ ಅಂಶವನ್ನು ಕಡಿಮೆ ಮಾಡಲು ನೆರವಾಗುತ್ತದೆ.

ಮೆಂತ್ಯ ಕಾಳನ್ನು ಸೇವಿಸುವುದರಿಂದ ತ್ವಚೆ ಆರೋಗ್ಯವಾಗಿರುವುದಲ್ಲದೇ, ಗುಳ್ಳೆ, ತುರಿಕೆ, ಮೊಡವೆ ಇಂತಹ ಅನೇಕ ಚರ್ಮ ಸಂಬಂಧಿ ರೋಗಗಳಿಗೆ ಮನೆಮದ್ದಾಗಿದೆ. ಅದು ಕೂದಲಿನ ತ್ವಚೆ ಕಾಪಾಡಿಕೊಳ್ಳಲೂ ಉಪಯೋಗಿಸಲಾಗುತ್ತದೆ.

ಜೀರ್ಣಕ್ರಿಯೆಯನ್ನು ಸಮತೋಲವನ್ನಾಗಿ ನಡೆಸಿಕೊಂಡು ಹೋಗಲು ಮೆಂತ್ಯೆಯದು ಬಹು ಮುಖ್ಯ ಪಾತ್ರ.

ಇದು ಪಚನ ಕ್ರಿಯೆಯನ್ನು ಸರಿದೂಗಿಸುತ್ತದೆ. ಅಲ್ಸರ್ ಮತ್ತು ಅಸಿಡಿಟಿಯಾಗಿದ್ದರೆ ಮೆಂತ್ಯವನ್ನು ಮಜ್ಜಿಗೆಗೆ ಬೆರೆಸಿ ಕುಡಿದರೆ ಅದು ನಿಯಂತ್ರಣಕ್ಕೆ ಬರುತ್ತದೆ. ಬೆಳಗಿನ ಜಾವ ಖಾಲಿ ಹೊಟ್ಟೆಯಲ್ಲಿ ಮೆಂತ್ಯ ಕಾಳನ್ನು ಸೇವಿಸಿದರೆ ಹೊಟ್ಟೆಯಲ್ಲಿನ ಕೀಟಾಣುಗಳನ್ನು ಮೆಂತ್ಯ ಕೊಂದು ಹಾಕುತ್ತದೆ. ಜ್ವರವಿದ್ದರೆ ಮತ್ತು ಸುಸ್ತಿನಿಂದ ಬಳಲುತ್ತಿದ್ದಾಗ ಮೆಂತ್ಯ ರಸವನ್ನು ಸೇವನೆ ಮಾಡಿದರೆ ಜ್ವರ ಕಡಿಮೆಯಾಗುತ್ತದೆ. ಮೆಂತ್ಯ ಸೇವನೆ ಮೆದುಳನ್ನು ಚುರುಕುಗೊಳಿಸುತ್ತದೆ.

ಔಷಧೀಯ ಗುಣಗಳ ಆಗರ ಕೆಂಪುಬಾಳೆ :– ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ. ಎಂಬಂತೆ ಪ್ರತಿಯೊಬ್ಬರು ಸೇವಿಸುವ ಆಹಾರ ಹೆಚ್ಚು ಶಕ್ತಿ ಮತ್ತು ಪೋಷಕಾಂಶಗಳನ್ನು ನೀಡುವಂತಿರಬೇಕು. ಆಹಾರ ಉತ್ತಮವಾಗಿದ್ದರೆ ಆರೋಗ್ಯವೂ ಉತ್ತಮವಾಗಿರುತ್ತದೆ. ಆಹಾರ ತಜ್ಞರ ಪ್ರಕಾರ ಹಣ್ಣು ಮತ್ತು ತರಕಾರಿ ದೇಹಕ್ಕೆ ಹೆಚ್ಚು ಪ್ರೋಟೀನ್ ಮತ್ತು ವಿಟಮಿನ್ ನೀಡುತ್ತದೆ.

ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಉಪಾಹಾರ, ಸಂಜೆ ಲಘು ಉಪಹಾರ, ರಾತ್ರಿ ಊಟ ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಹಣ್ಣು, ತರಕಾರಿ ಸೇವನೆ ಬಹಳ ಒಳ್ಳೆಯದು. ಹಣ್ಣುಗಳಲ್ಲಿ ಹಲವು ಔಷಧೀಯ ಗುಣ ಹೊಂದಿದೆ. ಕೆಂಪು ಬಾಳೆಹಣ್ಣು ಈ ಹಣ್ಣುಗಳ ಸಾಲಿನಲ್ಲಿ ಬರುತ್ತದೆ. ಹಳದಿ ಬಣ್ಣದ ಹಣ್ಣುಗಳಿಗಿಂತಲೂ ಕೆಂಪು ಬಾಳೆಹಣ್ಣು ಮಿಟಮಿನ್ 'ಸಿ' ಅಂಶವನ್ನು ಒಳಗೊಂಡಿದೆ. ಕ್ಯಾನ್ಸರ್ ಮತ್ತು ಹೃದಯ ಕಾಯಿಲೆಗಳಿಂದ ದೇಹಕ್ಕೆ ರಕ್ಷಣೆ ನೀಡುತ್ತದೆ. ಇದರಲ್ಲಿರುವ ಬೀಟಾ ಕ್ಯಾರೋಟಿನ್ ಅಂಶ ದೇಹಕ್ಕೆ ಒಳ್ಳೆಯದಾಗಿದೆ. ರೋಗ ನಿರೋಧಕ ಶಕ್ತಿಯನ್ನು ಈ ಬಾಳೆ ಹಣ್ಣು ಹೆಚ್ಚಿಸುತ್ತದೆ.

ಡಯಟರಿ ಫೈಬರ್ಸ್ ಈ ಹಣ್ಣಿನಲ್ಲಿ ಅಧಿಕವಾಗಿದ್ದು, ಇದನ್ನು ನಿತ್ಯವೂ ಸೇವಿಸುವುದು ಎರಡನೆ ಪ್ರಕಾರದ ಮಧುಮೇಹವನ್ನು ಕಡಿಮೆ ಮಾಡುತ್ತದೆ. ಕೆಂಪು ಬಾಳೆಹಣ್ಣುಗಳು ಹೆಚ್ಚುವರಿ ಪೊಟಾಷಿಯಂ ಒಳಗೊಂಡಿದ್ದು, ಕಿಡ್ನಿಸ್ಟೋನ್ ತಡೆಯುತ್ತದೆ ಮತ್ತು ಹೃದಯ ರೋಗ ಹಾಗೂ ಕ್ಯಾನ್ಸರ್ ಹುಟ್ಟಡಗಿಸುತ್ತದೆ. ಅಲ್ಲದೇ, ಮೂಳೆಗಳ ಆರೋಗ್ಯಕ್ಕೂ ಒಳ್ಳೆಯದು. ಹಾಗಾಗಿ ನಿತ್ಯವೂ ಬಾಳೆಹಣ್ಣು ಸೇವಿಸುವುದರಿಂದ ಕಿಡ್ನಿ ಸ್ಟೋನ್ ನಿಯಂತ್ರಣಕ್ಕೆ ಬರುತ್ತದೆ.

ಕೆಂಪು ಬಾಳೆಹಣ್ಣು ಜಠರದಲ್ಲಿ ಕರಗಿದ ಬಳಿಕ ಹೊಟ್ಟೆಯಲ್ಲಿ ಉತ್ಪನ್ನವಾಗುವ ವಾಯುವಿನ ಪ್ರಮಾಣವನ್ನು ತಗ್ಗಿಸಿ, ಹುಳಿತೇಗು, ಹೊಟ್ಟೆಯುರಿ, ಎದೆಯುರಿಗಳಿಂದ ರಕ್ಷಣೆ ನೀಡುತ್ತದೆ.

ಗರ್ಭಿಣಿಯಾದವರು ಪ್ರಥಮ ಮೂರು ತಿಂಗಳ ಅವಧಿಯಲ್ಲಿ ವಾಂತಿ ಮತ್ತು ವಾಕರಿಕೆ ತಡೆಯಲು ಕೆಂಪು ಬಾಳೆಹಣ್ಣು ಸೇವನೆ ಒಳ್ಳೆಯದು. ಇದು ರಕ್ತದಲ್ಲಿ ಸಕ್ಕರೆ ಪ್ರಮಾಣವನ್ನು ನಿಯಂತ್ರಿಸಿ ವಾಂತಿ ಮತ್ತು ವಾಕರಿಕೆ ಆಗದಂತೆ ತಡೆಯುತ್ತದೆ.

ಕೆಂಪು ಬಾಳೆಹಣ್ಣು ಸೇವನೆ ದೇಹದ ತೂಕ ಕಡಿಮೆ ಮಾಡಲು ಸಹಕಾರಿ. ಧೂಮಪಾನ ಚಟದಿಂದ ಬೇಗನೇ ಮುಕ್ತಿ ಪಡೆಯಲು ಈ ಹಣ್ಣು ಸಹಕಾರಿ. ಇದರಲ್ಲಿರುವ ಬಿ–ಮಿಟಮಿನ್, ಪೊಟಾಷಿಯಂ, ಧೂಮಪಾನ ತ್ಯಜಿಸುವವರ ರಕ್ತದಲ್ಲಿ ನಿಕೋಟಿನ್ ಇಲ್ಲದೇ ದೇಹ ಎದುರಿಸುವ ವ್ಯಾಕುಲತೆಯನ್ನು ಕಡಿಮೆ ಮಾಡುತ್ತದೆ. ಕೆಂಪು ಬಾಳೆಹಣ್ಣು ಸೇವನೆ ಜೀರ್ಣಕ್ರಿಯೆಗೆ ಸಹಕಾರಿ, ಕೆಂಪು ಬಾಳೆಹಣ್ಣು ರಕ್ತವನ್ನು ವೃದ್ಧಿಸುತ್ತದೆ. ಕೆಂಪು ಬಾಳೆಹಣ್ಣು ಶಕ್ತಿಯ ಮೂಲವಾಗಿದೆ. ಹಾಗಾಗಿ ಪ್ರತಿ ದಿನ ಒಂದೊಂದು ಹಣ್ಣು ಸೇವನೆ ಒಳ್ಳೆಯದು.

ಸಂಗ್ರಹ.

ಭಯಪಡಬೇಡ ನಾನು ನಿನ್ನನ್ನು ವಿಮೋಚಿಸಿದೆನಲ್ಲಾ, ನಿನ್ನ ಹೆಸರು ಹಿಡಿದು ಕರೆದೆನಲ್ಲಾ ನೀನು ನನ್ನವನೇ (ಯೆಶಾ. 43:1).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 0091 9902334941**

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD

(ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಕುಡಿಯುವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

ಪ್ರಿಯನೇ, ನೀನು ಆತ್ಮ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಹೊಂದಿ ಸುಕ್ಷೇಮವಾಗಿರಬೇಕೆಂದು ಪ್ರಾರ್ಥಿಸುತ್ತೇನೆ (3 ಯೋಹಾ. 1:2).

# ದೇವರಿಂದ ಎಲ್ಲವೂ ಸಾಧ್ಯ !

"ಮರಿಯಳು ಆ ದೂತನನ್ನು ಹೇಗಾದೀತು? ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದಕ್ಕೆ ದೂತನು– ನಿನ್ನ ಮೇಲೆ ಪರಿಶುದ್ಧಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು. ಅದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು ಮತ್ತು ನಿನ್ನ ಬಂಧುವಾದ ಎಲಿಜಬೇತಳಿದ್ದಾಳಲ್ಲಾ ಆಕೆ ಸಹ ಮುಪ್ಪಿನವಳಾದರೂ ಗರ್ಭಿಣಿಯಾಗಿದ್ದಾಳೆ. ಆಕೆಯ ಗರ್ಭದಲ್ಲಿ ಗಂಡು ಮಗುವಿದೆ. ಬಂಜೆ ಎನ್ನಿಸಿಕೊಂಡಿದ್ದ ಆಕೆಗೆ ಇದೇ ಆರನೆಯ ತಿಂಗಳು ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ ಅಂದನು" (ಲೂಕ. 1:34–37).

ಚರಿತ್ರೆಯಲ್ಲಿ ಒಂದು ಮುಖ್ಯವಾದ ಸಂಭವ, ದೇವಕುಮಾರನಾದ ಯೇಸು ಈ ಭೂಮಿಗೆ ಬಂದದ್ದು. ಆ ದೇವಚಿತ್ತವನ್ನು ನೆರವೇರಿಸಲು ಕನ್ನಿಕೆಯಾದ ಮರಿಯಳನ್ನು ದೇವರು ಆರಿಸಿಕೊಂಡನು. ಕ್ರಿಸ್ತನು ಮನುಷ್ಯಕುಮಾರನಾಗಿ ಜನಿಸಲು ಒಂದು ಶರೀರವನ್ನು ಸೃಷ್ಟಿಸಬೇಕೆಂಬುದೇ ಮರಿಯಳನ್ನು ಕುರಿತ ದೇವರ ಉದ್ದೇಶವಾಗಿತ್ತು. ಕರ್ತನ ಚಿತ್ತವನ್ನು ತಿಳಿಸಲು ಗಬ್ರಿಯೇಲ್ ದೂತನು, ನಜರೇತೆಂಬ ಊರಿನಲ್ಲಿ ವಾಸಿಸುತ್ತಿದ್ದ ಮರಿಯಳನ್ನು ಸಂಧಿಸಿ ಕರ್ತನ ಉದ್ದೇಶಗಳನ್ನು ತೀಮಾನಗಳನ್ನು ತಿಳಿಸಿದನು. ಮರಿಯಳು ಯಾವ ತೀರ್ಮಾನವನ್ನು ತೆಗೆದುಕೊಳ್ಳುವಳು ಎಂಬುದನ್ನು ತಂದೆಯಾದ ದೇವರೂ, ಎಲ್ಲಾ ದೇವದೂತರು ದೇವಕುಮಾರನೂ ಗಮನಿಸುತ್ತಿದ್ದಿರಬಹುದು.

## ಮರಿಯಳ ಸಂದೇಹ!

ಮರಿಯಳಲ್ಲಿ ಒಂದು ಸಂದೇಹ ಉಂಟಾಯಿತು. "ನಾನು ಪುರುಷನನ್ನು ಅರಿತವಳಲ್ಲ ಹಾಗಿದ್ದ ಮೇಲೆ ನಾನು ಹೇಗೆ ಗರ್ಭವತಿಯಾಗಲು ಸಾಧ್ಯ? ಹಾಗೆ ಒಂದು ವೇಳೆ ಆದರೋ ನನ್ನ ಮನೆಯವರು, ಸಮಾಜ ನನ್ನನ್ನು ಹೇಗೆ ಅಂಗೀಕರಿಸುವರು? ನನ್ನನ್ನು ಕಲ್ಲೆಸೆದು ಕೊಲ್ಲುವರಲ್ಲಾ ಇಲ್ಲವೇ ಜೀವಂತ ಸುಟ್ಟುಬಿಡುವರು. ನನ್ನ ಗಂಡನಾಗಿ ಬರುವವನು ಅದನ್ನು ಹೇಗೆ ಸ್ವೀಕರಿಸುವನು? ನನ್ನ ಭವಿಷ್ಯ ನಾಶವಾಗಿ ಬಿಡುವದಲ್ಲಾ ಎಂದು ಯೋಚಿಸಿದಳು.

ಕರ್ತನು ನಿಶ್ಚಯವಾಗಿಯೇ ಅದ್ಭುತವನ್ನು ಮಾಡುವವನು. ತಂದೆ, ತಾಯಿ ಇಲ್ಲದೆಯೇ ಆದಾಮನನ್ನೂ ಹವ್ವಳನ್ನೂ ಸೃಷ್ಟಿಸಿದ ದೇವರು ಸರ್ವಶಕ್ತನು. ಆತನಿಂದ ಆಗದ ಕಾರ್ಯ ಒಂದೂ ಇಲ್ಲ. ಮುಪ್ಪಾದ ಅಬ್ರಹಾಮನಿಗೂ, ಗರ್ಭಧರಿಸುವ ಕಾಲ ಮೀರಿ ಹೋದ ಸಾರಳಿಗೂ ಅದ್ಭುತವಾದ ಸಂತತಿಯನ್ನು ಸೃಷ್ಟಿಸಿ ಆಕಾಶದ ನಕ್ಷತ್ರಗಳಂಥ ಸಂತತಿಯನ್ನು ಕೊಟ್ಟ ದೇವರು, ಮರಿಯಳ ಮೂಲಕ ಇನ್ನೊಂದು ಮಹಿಮೆಯಾದ ಸಂತತಿಯನ್ನು ಸೃಷ್ಟಿಸಲು ಶಕ್ತನಾಗಿರುವನು!

## ಇದು ಹೇಗೆ ಸಾಧ್ಯ ?

'ಇದು ಹೇಗೆ ಸಾಧ್ಯ' ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದ ಮರಿಯಳ ಪ್ರಶ್ನೆಗೆ ದೇವದೂತನ ಉತ್ತರವೇನು? "ನಿನ್ನ ಬಂಧುವಾದ ಎಲಿಜಬೇತಳಿದ್ದಾಳಲ್ಲಾ, ಆಕೆ ಸಹಾ ಮುಪ್ಪಿನವಳಾದರೂ ಗರ್ಭಿಣಿಯಾಗಿದ್ದಾಳೆ. ಬಂಜೆ ಎನಿಸಿಕೊಂಡಿದ್ದ ಆಕೆಗೆ ಇದೇ ಆರನೆಯ ತಿಂಗಳು. ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ" ಅಂದನು (ಲೂಕ. 1:36–37). ಪ್ರಿಯರೇ, ಕರ್ತನನ್ನು ನಂಬಿ ನೀವು ಹೇಳಿರಿ "ದೇವರಿಂದ ಆಗದ ಕಾರ್ಯ ಒಂದೂ ಇಲ್ಲ" ಎಂದು.

ಇದು ಹೇಗೆ ಆಗುವದು? ಎಂದು ಮರಿಯಳು ನೆನಸಿದ ಹಾಗೆ ನಿಮ್ಮ ಜೀವಿತದಲ್ಲೂ ಹಲವು ಪ್ರಶ್ನೆಗಳು ಎದ್ದಿರಬಹುದು. ಅಂಥ ಸನ್ನಿವೇಶಗಳಲ್ಲಿ ಕರ್ತನನ್ನೆ ಆಶ್ರಯಿಸಿ, ಬಾಯಿ ತೆರೆದು ವಿಶ್ವಾಸ ಅರಿಕೆ ಮಾಡಿರಿ. ನನ್ನ ದೇವರಿಂದ ಎಲ್ಲವೂ ಸಾಧ್ಯ ಎಂದು ಹೇಳಿರಿ. ಒಂದು ಕ್ರಿಸ್ಮಸ್ ಗೀತಾರಾಧನೆಯು ನಡೆಯುತ್ತಿದ್ದ ಸ್ಥಳದಲ್ಲಿ ಒಬ್ಬ ಅನ್ಯನು ಕ್ರೈಸ್ತರನ್ನು ಗೇಲಿ ಮಾಡುತ್ತಾ "ಕನ್ಯೆಯಾದ ಮರಿಯಳ ಗರ್ಭದಲ್ಲಿ ಯೇಸು ಬರಲು ಹೇಗೆ ಸಾಧ್ಯ? ಇದನ್ನು ಮನುಷ್ಯರು ನಂಬುವರಾ? ವಿಜ್ಞಾನಿಗಳು ನಂಬುವರಾ? ಈ ಇಪ್ಪತ್ತನೇ ಶತಮಾನದಲ್ಲಿ ಜ್ಞಾನವು ಇಷ್ಟೊಂದು ವೃದ್ಧಿಯಾಗಿರುವಾಗ, ಇದನ್ನು ಯಾರು ಅಂಗೀಕರಿಸುವರು? ಎಂದು ವಾದಿಸಿದನು. ಆ ಕೂಟಕ್ಕೆ ಬಂದಿದ್ದ ಒಬ್ಬ ಬಡ ಹೆಣ್ಣು ಮಗಳು ಇದನ್ನು ಕೇಳಿ ಅಯ್ಯಾ, ನಿಮ್ಮ ಪುರಾಣದಲ್ಲಿ ದೇವರು ತೃಣ ಕಾಷ್ಟಗಳಲ್ಲಿ ಇರುವನೆಂದು ಹೇಳುವದೇ ಹಾಗಿರುವಾಗ, ಒಬ್ಬ ಕನ್ನಿಕೆಯ ಗರ್ಭದಲ್ಲಿ ಇರಲು ಸಾಧ್ಯವಿಲ್ಲವಾ? ಎಂದು ಕೇಳಿದಳು. ಒಂದು ದೊಡ್ಡ ಆಲದ ಮರವನ್ನು ಒಂದು ಸಣ್ಣ ಬೀಜದೊಳಗೆ ದೇವರು ಅಡಗಿಸಿರುವನಲ್ಲವೇ. ಅದರಂತೆಯೇ

ಆತನು ಮೋಶೆಗೆ ತನ್ನ ಮಾರ್ಗವನ್ನೂ ಇಸ್ರಾಯೇಲ್ಯರಿಗೆ ತನ್ನ ಕೃತ್ಯಗಳನ್ನೂ ಪ್ರಕಟಿಸಿದನು (ಕೀರ್ತ. 103:7).

ದೈವೀಕತ್ವದ ಪರಿಪೂರ್ಣತೆಯನ್ನೆಲ್ಲಾ ಕನ್ನಿಕೆಯ ಗರ್ಭದಲ್ಲಿ ಶಿಶುವಾಗಿ ಅಡಗಿಸಿಟ್ಟನು.

## ನಂಬಿಕೆಯೆಂಬ ಶಕ್ತಿ!

ಕ್ರೈಸ್ತ ಮಾರ್ಗಕ್ಕೆ ಬಂದ ನಂತರ ನಿಮ್ಮಲ್ಲಿ ನಂಬಿಕೆ ವೃದ್ಧಿ ಹೊಂದುತ್ತಲೇ ಇರಬೇಕು. ನಂಬಿಕೆಯಲ್ಲಿ ಬೆಳೆಯಬೇಕು. ಆತ್ಮದಲ್ಲಿ ಬಲಗೊಳ್ಳಬೇಕು. ವಿಶ್ವಾಸ ಅರಿಕೆ ಮಾಡಿ ಕರ್ತನಿಗಾಗಿ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಬೇಕು.

ತನ್ನ ಮಗನ ಬಿಡುಗಡೆಗಾಗಿ ಬಂದ ಒಬ್ಬ ತಂದೆಯನ್ನು ನೋಡಿ ಯೇಸುಕ್ರಿಸ್ತನು ಹೇಳಿದನು, "ನಂಬುವವನಿಗೆ ಎಲ್ಲಾ ಆಗುವದು" ಎಂದು (ಮಾರ್ಕ. 9:23) ಕ್ರಿಸ್ತನ ಬೋಧನೆಯನ್ನು ಕೇಳಿ ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದದ್ದನ್ನು ನೋಡಿ, ಯೇಸು ಅವರಿಗೆ ಹೀಗೆ ಹೇಳಿದನು ಇದು ಮನುಷ್ಯರಿಗೆ ಅಸಾಧ್ಯ; ದೇವರಿಗೆ ಅಸಾಧ್ಯವಲ್ಲ; ದೇವರಿಗೆ ಎಲ್ಲವೂ ಸಾಧ್ಯ ಎಂದು. ಕರ್ತನು ಕುರುಡರಿಗೆ ದೃಷ್ಟಿ ನೀಡುವದಕ್ಕೆ ಮೊದಲು ಅವರನ್ನು ನೋಡಿ "ನಾನು ಇದನ್ನು ಮಾಡಬಲ್ಲೆನೆಂದು ನಂಬುತ್ತೀರೋ" ಎಂದು ಕೇಳಿದನು (ಮತ್ತಾ. 9:28). ಕರ್ತನು ಹೀಗೆ ಕೇಳಿದ್ದರ ರಹಸ್ಯವೇನು? ನಿಮ್ಮ ನಂಬಿಕೆಯನ್ನು ಬಾಯಿ ತೆರೆದು ಅರಿಕೆ ಮಾಡಬೇಕೆಂಬುದೇ.

## ಭರವಸವಿಡುವವನು ಆತುರಪಡನು!

ಹೆರೋದ ರಾಜನಿಗೆ ಹೆದರಿ ಮರಿಯಳೂ, ಯೋಸೇಫನೂ ಬಾಲಕನಾದ ಯೇಸುವನ್ನು ಎತ್ತಿಕೊಂಡು ಐಗುಪ್ತ್ಯಕ್ಕೆ ಓಡಿಹೋಗಬೇಕಾಯಿತು. ಹಿಂದೆ ಮುಂದೆ ಗೊತ್ತಿಲ್ಲದ ದೇಶವಾದ ಐಗುಪ್ತ್ಯಕ್ಕೆ ಯಾವ ಊರಿಗೆ ಹೋಗುವದು? ಎಲ್ಲಿ ತಂಗುವದು? ಯಾರು ಆಶ್ರಯ ಕೊಡಲು ಸಾಧ್ಯ? ಎಂಬ ಹಲವು ಪ್ರಶ್ನೆಗಳು ಅವರೊಳಗೆ ಉದ್ಭವಿಸಿರಬಹುದು. ಆದರೂ ಅವರು ಕರ್ತನು ಎಲ್ಲವನ್ನೂ ನೋಡಿಕೊಳ್ಳುವನು ದೇವರು ನನಗಾಗಿ ಎಲ್ಲವನ್ನೂ ಮಾಡುವನು ಎಂಬ ನಂಬಿಕೆಯಿಂದ ಕರ್ತನನ್ನೇ ಆಶ್ರಯಿಸಿಕೊಂಡರು. "ಭರವಸವಿಡುವವನು ಆತುರಪಡನು" (ಯೆಶಾ. 28:16) ನಂಬಿಕೆಯಿಂದ ಇದ್ದ ಮರಿಯಳು ತನ್ನ ಜೀವಿತ ಕಾಲವೆಲ್ಲಾ ಕಳವಳಪಡಲಿಲ್ಲ, ಆತುರಪಡಲಿಲ್ಲ. ಯೇಸು ಗೆತ್ಸೇಮನೆ ತೋಟದಲ್ಲಿ ಬಂಧಿಸಲ್ಪಟ್ಟಾಗಲೂ ಆತನನ್ನು ಶಿಲುಬೆಗೆ ಹಾಕಲು ಕರೆದುಕೊಂಡು ಹೋದಾಗಲೂ ಶಿಲುಬೆಯಲ್ಲಿ ಜಡಿಯಲ್ಪಟ್ಟ ವೇಳೆಯಲ್ಲೂ ಮರಿಯಳು ಭಯಪಡಲಿಲ್ಲ. ಆಕೆಯ ನಂಬಿಕೆ ನಿಮಗೆ ಮಾದರಿಯಾಗಲಿ. ನಿಮ್ಮ ನಂಬಿಕೆಯನ್ನು ತಟ್ಟಿ ಎಬ್ಬಿಸಲಿ.

ನಂಬಿಕೆಗೆ ಮಾದರಿಯಾದ ಅನೇಕ ಭಕ್ತರನ್ನು ಹಳೆಯ ಒಡಂಬಡಿಕೆಯ ಕಾಲದಲ್ಲೂ ನೋಡಬಹುದು. ನಂಬಿಕೆಯಿಂದಲೇ ಅಬ್ರಹಾಮನು ವಿಶ್ವಾಸಿಗಳ ತಂದೆ ಎಂದು ಹೆಸರು ಪಡೆದನು. ಇಸ್ರಾಯೇಲ್ಯರು ಐಗುಪ್ತ ದೇಶವನ್ನು ಬಿಟ್ಟು ಹೊರಟು ಕೆಂಪು ಸಮುದ್ರದ ಬಳಿ ಬಂದಾಗ ಫರೋಹನ ಸೈನ್ಯ ಬೆನ್ನಟ್ಟಿ ಬರುವದನ್ನು ಕಂಡು ಭಯಭೀತರಾದರು. ಆಗ ಮೋಶೆಗೆ ಕರ್ತನು ಅವರ ಕೈಯಲ್ಲಿದ್ದ ದೇವದಂಡವನ್ನು ಸಮುದ್ರದ ಮೇಲೆ ಚಾಚುವಂತೆ ಹೇಳಿದಾಗ, ದೇವರ ಮಾತನ್ನು ಒಂದು ಮಗುವಿನಂತೆ ನಂಬಿ ಸಮುದ್ರದ ಮೇಲೆ ಚಾಚಿದಾಗ ಸಮುದ್ರ ಇಬ್ಭಾಗವಾಗಿ ಒಣನೆಲದಲ್ಲಿ ಇಸ್ರಾಯೇಲ್ಯರು ನಡೆದು ಹೋದರು.

ನಂಬಿಕೆ ಎಂಬುದು ಬಹು ದೊಡ್ಡ ಶಕ್ತಿ. ಎಲೀಯನು ನಮ್ಮಂತೆಯೇ ಒಬ್ಬ ಮನುಷ್ಯನಾಗಿದ್ದನು. ಅವನು ಆಸಕ್ತಿಯಿಂದ ತುಂಬಿದ ನಂಬಿಕೆಯಿಂದ ಕೂಡಿದ ಪ್ರಾರ್ಥನೆ ದೇಶದಲ್ಲಿ ಮೂರುವರೆ ವರುಷ ಮಳೆ ಬಾರದಂತೆ ಮಾಡಿತು. ಸಿಂಹದ ಗವಿಯಲ್ಲಿ ಹಾಕಲ್ಪಟ್ಟ ದಾನಿಯೇಲನ ದೇವರ ಮೇಲಿನ ನಂಬಿಕೆ ಸಿಂಹಗಳ ಗವಿಯಲ್ಲಿ ಹಾಕಲ್ಪಟ್ಟ ದಾನಿಯೇಲನ ದೇವರ ಮೇಲಿನ ನಂಬಿಕೆ ಸಿಂಹಗಳ ಬಾಯನ್ನು ಕಟ್ಟಿ ಹಾಕಿತು. ಪ್ರಿಯರೇ, ಇಂದು ನಿಮ್ಮ ಸುತ್ತಲೂ ಶತ್ರುಗಳು ಸಿಂಹದೋಪಾದಿಯಲ್ಲಿ ನಿಮ್ಮ ಮೇಲೆ ಆಕ್ರಮಣ ನಡೆಸಲು ಹೊಂಚು ಹಾಕುತ್ತಿರುವರಾ? ಹೆದರಬೇಡಿರಿ. ನೀವು ಆರಾಧಿಸುವ ಕರ್ತನ ಮೇಲೆ ಪೂರ್ಣವಾದ ವಿಶ್ವಾಸವನ್ನಿಟ್ಟು ಆತನು ನಿಮಗೆ ಯೇಸುಕ್ರಿಸ್ತನ ಹೆಸರಿನಲ್ಲಿ ಕೊಟ್ಟಿರುವ ಅಧಿಕಾರವನ್ನು ಉಪಯೋಗಿಸಿ ಶತ್ರುಗಳ ಬಾಯನ್ನು ಕಟ್ಟಿ ಹಾಕಿರಿ. ನಿಮಗೆ ವಿರೋಧವಾಗಿ ಎದ್ದಿರುವ ಎಲ್ಲಾ ಮೋಸ, ತಂತ್ರಗಳ ಶಕ್ತಿಗಳನ್ನು ಮುರಿದು ಹಾಕಿರಿ. ಕ್ರಿಸ್ತನೇ ನಿಮ್ಮ ಜಯಧ್ವಜವಾಗಿರಲಿ. ಇಸ್ರಾಯೇಲಿಗೆ ವಿರೋಧವಾಗಿ ಕಣಿ ಹೇಳುವವರಿಲ್ಲ. ಯಾಕೋಬಿಗೆ ವಿರೋಧವಾಗಿ ಮಂತ್ರತಂತ್ರಗಳಿಲ್ಲ, ನಮ್ಮ ದೇವರಿಗೆ ಅಸಾಧ್ಯವಾದ ಕಾರ್ಯ ಒಂದೂ ಇಲ್ಲ.

ಸಂಗ್ರಹ

ನಾನು ಯಾವದನ್ನು ಹೊಂದುವದಕ್ಕಾಗಿ ಕ್ರಿಸ್ತ ಯೇಸು ನನ್ನನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವದಕ್ಕೋಸ್ಕರ ಓಡುತ್ತಾ ಇದ್ದೇನೆ (ಫಿಲಿ. 3:12).

# ನೀತಿವಂತನ ಆಶೀರ್ವಾದಗಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

"ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ ಅಗೋ [ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು. ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದ್ದದರಿಂದ ನನಗೆ ಮುಂದಿನವನಾದನು ಎಂದು ನಾನು ಹೇಳಿದ ಮಾತು ಈತನ ವಿಷಯವಾಗಿಯೇ" (ಯೋಹಾ. 1:29). "ಆದರೂ ಮದಲಿಂಗನ ಗೆಳೆಯನು ಅವನ ಹತ್ತಿರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಬಹು ಸಂತೋಷ ಪಡುತ್ತಾನಲ್ಲವೇ. ಇದರಂತೆ ನನಗಿರುವ ಸಂತೋಷ; ಅದು ನೆರವೇರಿತು. ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು ಅಂದನು" (ಯೋಹಾ. 3:29–30). ಹೀಗೆ ಅನೇಕ ಕಡೆಗಳಲ್ಲಿ ಕರ್ತನಾದ ಯೇಸುಕ್ರಿಸ್ತನ ಕುರಿತಾಗಿ ಸಾಕ್ಷಿ ಕೊಟ್ಟಂತ ಸ್ನಾನಿಕ ಯೋಹಾನನು ಸೆರೆಮನೆಯಲ್ಲಿ ಹಾಕಲ್ಪಟ್ಟ ಸಂದರ್ಭದಲ್ಲಿ ನಂಬಿಕೆಯಲ್ಲಿ ಕುಂದಿಹೋಗಿ ಕ್ರಿಸ್ತನ ಕುರಿತು ಸಂಶಯ ವ್ಯಕ್ತಪಡಿಸುವಂತದನ್ನು ನಾವು ಕಾಣಬಹುದು. "ಯೋಹಾನನು ಕ್ರಿಸ್ತನ ಕಾರ್ಯಗಳ ಸುದ್ದಿಯನ್ನು ಸೆರೆಮನೆಯಲ್ಲಿ ಕೇಳಿ ಆತನ ಬಳಿಗೆ ಶಿಷ್ಯರನ್ನು ಕಳುಹಿಸಿ ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ ಎಂದು ಕೇಳಿಸಿದನು. ಆತನು ಅವರಿಗೆ ಪ್ರತ್ಯುತ್ತರವಾಗಿ ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತವೆ; ಕುಷ್ಠರೋಗಿಗಳು ಶುದ್ಧರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತವೆ; ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ; ನೀವು ಹೋಗಿ ಕಂಡು ಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ. ನನ್ನ ವಿಷಯದಲ್ಲಿ ಸಂಶಯ ಪಡದವನೇ ಧನ್ಯನು ಎಂದು ಹೇಳಿದನು" (ಮತ್ತಾ. 11:2–6). ಕರ್ತನಾದ ಯೇಸುಕ್ರಿಸ್ತನ ಕುರಿತಾಗಿ ಇಷ್ಟು ಸಾಕ್ಷಿ ಹೇಳಿದ ಸ್ನಾನಿಕನಾದ ಯೋಹಾನನೇ ಕ್ರಿಸ್ತನ ಕುರಿತಾಗಿ ಸಂಶಯ ಪಡಬೇಕಾಗಿ ಬಂದಿತು. ಅದಕ್ಕೆ ಕಾರಣ ಸೆರೆಮನೆಯ ಕಷ್ಟಗಳೇ. ನಮ್ಮ ಜೀವಿತದಲ್ಲಿ ಕಷ್ಟಗಳು, ಸಮಸ್ಯೆಗಳು ಬರುವಾಗ ದೇವರ ಕುರಿತಾಗಿ ಸಂಶಯ ಪಡುತ್ತೇವೆ. ದೇವರು ನಮ್ಮೊಂದಿಗೆ ಇದ್ದಾನೋ? ದೇವರು ಈ ಸಮಸ್ಯೆಯಿಂದ ಬಿಡುಗಡೆ ಮಾಡ ಬಲ್ಲನೋ? ದೇವರು ಈ ರೋಗದಿಂದ ಬಿಡುಗಡೆ ಮಾಡುವನೋ? ದೇವರು ಸಾಲದಿಂದ ಬಿಡುಗಡೆ ಮಾಡುವನೋ? ನನ್ನ ಮಗನ, ಮಗಳ ಮದುವೆಯಾಗುವದೋ? ನನ್ನ ಗಂಡ ಕುಡಿಕತನದಿಂದ ಬಿಡುಗಡೆ ಹೊಂದುವನೋ ಹೀಗೆ ಕಷ್ಟಗಳ ಮಧ್ಯದಲ್ಲಿ ದೇವರ ಮೇಲಿರುವ ನಂಬಿಕೆಯಿಂದ ಕುಂದಿ ಹೋಗಿ ದೇವರಲ್ಲಿರುವ ಯಥಾರ್ಥವನ್ನು ಬಿಟ್ಟು ನಾವು ಅಡ್ಡ ದಾರಿ ಹಿಡಿಯುತ್ತೇವೆ. ಸಮಸ್ಯೆ ಪರಿಹಾರಕ್ಕಾಗಿ ಮಂತ್ರವಾದಿಗಳನ್ನು ಹುಡುಕಿ ಹೋಗುತ್ತೇವೆ, ಜೋಯಿಸರನ್ನು ಹುಡುಕಿ ಹೋಗುತ್ತೇವೆ, ತಪ್ಪಾದ ಸಂಗತಿಗಳನ್ನು, ತಾಯತಗಳನ್ನು ಶರೀರದಲ್ಲಿ ಕಟ್ಟಿಕೊಳ್ಳುತ್ತೇವೆ. ದೇವರ ಮೇಲಿರುವ ನಂಬಿಕೆ ಬಿಟ್ಟು ಬಿಟ್ಟು ಮನುಷ್ಯರ ಮೇಲೆ ನಂಬಿಕೆ ಇಡುತ್ತೇವೆ. ಕೆಲವು ನೂಲುಗಳ ಮೇಲೆ, ಕೆಲವು ವಸ್ತುಗಳ ಮೇಲೆ ನಂಬಿಕೆ ಇಡುತ್ತೇವೆ. ಇದರಿಂದ ಸಮಸ್ಯೆಗಳ ಮೇಲೆ ಪರಿಹಾರ ಕಂಡುಕೊಳ್ಳದೆ ಇನ್ನು ನಿರಾಶೆಗೆ ಒಳಪಟ್ಟು ಜೀವಿತದಲ್ಲಿ ಜಿಗುಪ್ಸೆಗೊಳ್ಳುತ್ತೇವೆ. ಯೆರೆ. 2:13ರಲ್ಲಿ ಕರ್ತನು ಈ ರೀತಿ ಹೇಳುತ್ತಾನೆ, ನನ್ನ ಜನರು ಎರಡು ಅಪರಾಧ ಮಾಡಿದ್ದಾರೆ; ಜೀವಜಲದ ಬುಗ್ಗೆಯಾದ ನನ್ನನ್ನು ಬಿಟ್ಟಿದ್ದಾರೆ, ತಮಗೋಸ್ಕರ ತೊಟ್ಟಿಗಳನ್ನು, ನೀರು ನಿಲ್ಲದ ಬಿರಿದ ತೊಟ್ಟಿಗಳನ್ನು ಕೊರೆದುಕೊಂಡಿದ್ದಾರೆ. ಸೈತಾನನು ಶೋಧನೆಗಳ ಸಮಯದಲ್ಲಿ ದೇವರ ವಾಕ್ಯದ ಮೇಲಿರುವ ನಂಬಿಕೆ ಹಾಗೂ ಯಥಾರ್ಥವನ್ನು ಕೆಡಿಸುತ್ತಾನೆ, ಮಾತ್ರವಲ್ಲದೆ ದೇವರ ಮೇಲಿರುವ ನಂಬಿಕೆ ಮತ್ತು ಯಥಾರ್ಥವನ್ನು ಕೆಡಿಸುತ್ತಾನೆ. ನಾವು ಮೊದಲೇ ಧ್ಯಾನ ಮಾಡಿದಂತೆ ಸೈತಾನನು ಹವ್ವಳ ಬಳಿ ಸ್ನೇಹಿತನಂತೆ ನಟನೆ ಮಾಡಿ ಬಂದನು. ಅವನ ಒಂದೇ ಒಂದು ಉದ್ದೇಶವಾಗಿತ್ತು ಆದಾಮ ಮತ್ತು ಹವ್ವರಿಗೆ ದೇವರಲ್ಲಿರುವ ನಂಬಿಕೆ, ಪ್ರೀತಿ, ವಿಧೇಯತೆ, ಯಥಾರ್ಥವನ್ನು ಕೆಡಿಸಿ ದೇವರ ಅನ್ಯೋನ್ಯತೆ ಮತ್ತು ಸಂಬಂಧ'ದಿಂದ ದೂರ ಮಾಡಬೇಕೆಂಬುದಾಗಿತ್ತು. ಆದರೆ ಆದಾಮ ಮತ್ತು ಹವ್ವ ಇದನ್ನು ವಿವೇಚಿಸಲಿಲ್ಲ. ಅನೇಕ ಸಲ ಸ್ನೇಹಿತರಂತೆ ನಟನೆ ಮಾಡಿ ನಮ್ಮಲ್ಲಿ ಬರುವಂತ ದುರ್ಬೋಧಕರನ್ನು ಗುರುತಿಸುವದಿಲ್ಲ, ಸೋತು ಹೋಗುತ್ತೇವೆ. ನನಗೆ ಗೊತ್ತಿರುವಂತಹ ಒಬ್ಬ ರಕ್ಷಣೆ ಹೊಂದಿದ ಕ್ರೈಸ್ತ ಸಹೋದರನನ್ನು ದೇವರು ಶಕ್ತವಾಗಿ

ಇಗೋ ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ,
ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ (ಇಬ್ರಿ. 10:7).

ಉಪಯೋಗಿಸುತ್ತಿದ್ದನು. ಒಳ್ಳೇ ಪ್ರಾರ್ಥನೆ ವೀರನಾಗಿದ್ದನು, ಅನೇಕರಿಗೆ ಸುವಾರ್ತೆ ಸಾರಿ ರಕ್ಷಣೆ ಜೀವಿತಕ್ಕೆ ನಡೆಸುತ್ತಿದ್ದನು. ಸಭೆಯವರಿಂದಲೂ, ಅನೇಕರಿಂದಲೂ ಒಳ್ಳೇ ಸಾಕ್ಷಿ ಹೊಂದಿದವನಾಗಿದ್ದನು. ಇತ್ತೀಚೆಗೆ ಯಾರೋ ದುರ್ಬೋಧಕರು ಆತನ ಬಳಿಗೆ ಬಂದು ಅವನ ಮನಸ್ಸನ್ನು ಕೆಡಿಸಿಬಿಟ್ಟರು. ಅವನಲ್ಲಿ ದೇವರ ತ್ರೈಯಕತ್ವದ ಕುರಿತಾಗಿ ಸಂಶಯ ಬಂದಿತು. ಮೊದಲು ತಂದೆ, ಮಗ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡವನಾಗಿದ್ದನು. ಈಗ ದುರ್ಬೋಧಕರ ಮಾತು ಕೇಳಿ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡನು. ಮುಂಚೆ ಬಾಯಲ್ಲಿ ಯಾವುದೇ ದೂಷಣೆ ಇಲ್ಲದವನಾಗಿದ್ದನು, ಈಗ ತ್ರೈಯೇಕತ್ವವನ್ನು ಅಲ್ಲಗಳೆಯುವುದು ಮಾತ್ರವಲ್ಲ, ಪೂರ್ಣ ಸುವಾರ್ತಾ ಸಭಾಪಾಲಕರನ್ನು ಮತ್ತು ಸಭೆಯನ್ನು ದೂಷಿಸುವುದಕ್ಕೆ ಪ್ರಾರಂಭಿಸಿದನು, ಮುಂಚೆ ವ್ಯಾಕದ ಸುವಾರ್ತೆಯನ್ನು ಜನರ ಬಳಿ ತೆಗೆದುಕೊಂಡು ಹೋಗುವ ವ್ಯಕ್ತಿ ಈತನಾಗಿದ್ದನು, ಆದರೆ ಈಗ ಬಾಯಲ್ಲಿ ದೂಷಣೆ ತುಂಬಿದ ವ್ಯಕ್ತಿಯಾದನು. ಹಂತ ಹಂತವಾಗಿ ಪ್ರಾರ್ಥನೆ ಜೀವಿತದಲ್ಲಿ ಹಿಂಜಾರಿ ಹೋದನು. ಈಗ ಪರಿಶುದ್ಧತೆಯನ್ನು, ಪ್ರಾರ್ಥನೆ, ಕೃಪೆಯನ್ನು ಕಳಕೊಂಡ ಸಂಸೋನನ ಹಾಗೆ ಪಾಪದಲ್ಲಿ ಬಿದ್ದು ಹೊರಳಾಡುತ್ತಿದ್ದಾನೆ. ಇಂಥ ಎಷ್ಟೋ ಉದಾಹರಣೆಯನ್ನು ನಾನು ನಿಮಗೆ ಕೊಡಬಹುದು. ದೇವರು ಆದಾಮ ಹವ್ವರಿಗೆ ಮೊದಲೇ ಒಳ್ಳೇದರ ಕೆಟ್ಟದರ ಅರುಹ ಹುಟ್ಟಿಸುವ ಮರದ ಕುರಿತಾಗಿ ಎಚ್ಚರ ಕೊಟ್ಟಿದ್ದನು. "ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ, ಕಾಯುವದಕ್ಕೂ ಅದರಲ್ಲಿ ಇಟ್ಟನು. ಇದಲ್ಲದೆ ಯೆಹೋವ ದೇವರು ಆ ಮನುಷ್ಯನಿಗೆ ನೀನು ತೋಟದಲ್ಲಿರುವ ಎಲ್ಲಾ ಮರದ ಹಣ್ಣನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು"(ಆದಿ. 2:15–17). ದೇವರು ಮೊದಲೇ ಆದಾಮ ಹವ್ವರಿಗೆ ಬರಲಿರುವ ಶೋಧನೆ ಕುರಿತಾಗಿ ಎಚ್ಚರಿಸಿದನು. ಆದರೆ ಆದಾಮ ಹವ್ವರು ಗ್ರಹಿಸಲಿಲ್ಲ. ಆದಾಮ ಹವ್ವರು ದೇವರ ಮೇಲೂ, ದೇವರ ವಚನದ ಮೇಲೂ ಪೂರ್ಣ ನಂಬಿಕೆ ಮತ್ತು ವಿಶ್ವಾಸ ಇಡಬೇಕಾಗಿತ್ತು. "ಆಗ ಸರ್ಪವು ಸ್ತ್ರೀಗೆ ನೀವು ಹೇಗೂ ಸಾಯುವುದಿಲ್ಲ; ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ; ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು" (ಆದಿ. 3:4–5). ಅನೇಕರು ದೇವರ ವಾಕ್ಯದ ಮೇಲೆ ನಂಬಿಕೆ ಇಡುವುದಿಲ್ಲ, ತಮ್ಮನ್ನು ರಕ್ಷಣೆಗೆ ನಡಿಸಿ ಆತ್ಮೀಕವಾಗಿ ಮಾರ್ಗದರ್ಶನವನ್ನು ಮಾಡಿ ಪೋಷಿಸುವಂತಹ ಸಭಾಪಾಲಕರನ್ನು ನಂಬುವುದಿಲ್ಲ, ಬದಲಾಗಿ ಯಾವಾಗಲೋ ಎಲ್ಲೋ ಸಿಕ್ಕಿದಂತಹ ದುರ್ಬೋಧಕರ ಮಾತನ್ನು ನಂಬಿ ಮೋಸ ಹೋಗುತ್ತಾರೆ. (1 ತಿಮೊ. 4:1–2) ಈ ರೀತಿ ಹೇಳುತ್ತದೆ, ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ. ಸುಳ್ಳು ಬೋಧಕರು ಬಂದು ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂಬ ಬರೆಯುಳ್ಳವರಾದರೂ ತಾವು ನೀತಿವಂತರೆಂದು ತೋರ್ಪಡಿಸಿಕೊಂಡು ಅವರನ್ನು ಮರಳುಗೊಳಿಸುವರು.

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**

**ಡಿಜಿಎಮ್ ಬೇತೇಲ್ ಚರ್ಚ್ ಅರ್ಪಿಸುವ**

**4 ದಿವಸದ**

**ಉಚಿತ ಪ್ರವೇಶ**

# ಬಿಡುಗಡೆ, ಅಭಿಷೇಕ ಹಾಗೂ ಸ್ವಸ್ಥತೆಯ ಕೂಟಗಳು

**ದಿನಾಂಕ: 06.03.16 ರಿಂದ 09.03.16ರವರೆಗೆ ಸಮಯ : ಬೆಳಿಗ್ಗೆ ಗಂಟೆ 10–00 ರಿಂದ**

**ಸ್ಥಳ: ಬೇತೇಲ್ ಚರ್ಚ್ ಯೇಸುಪುರ, ಶಂಕರಪುರ – 574115, ಉಡುಪಿ ಜಿಲ್ಲೆ**

**ನೀವು ಬಂದು ದೇವರ ಆಶೀರ್ವಾದವನ್ನು ಹೊಂದಿಕೊಳ್ಳಿರಿ, ಇತರರನ್ನು ನಿಮ್ಮೊಂದಿಗೆ ಕರೆತನ್ನಿರಿ.**

**ಹೆಚ್ಚಿನ ವಿವರಗಳಿಗಾಗಿ 0091 9902334941, 0091 9964070654ನ್ನು ಸಂಪರ್ಕಿಸಿರಿ.**

ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣ ಕೊಟ್ಟನು (ರೋಮ. 5:6).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ,
ಇಲ್ಲದೇ ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ (1 ಕೊರಿ. 2:6).

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

6) **ಸಜ್ಜನರ ನಾಶನ (ಹಿಂಜಾರುವಿಕೆಯ ಅರ್ಥ)** (ಯೆಶಾ. 57:1)

1) ನೀತಿಯ ಜೀವಿತದಿಂದ ಬಿದ್ದು ಹೋಗುವುದು.

2) ಭಕ್ತಿಯ ಜೀವಿತದಿಂದ ಬಿದ್ದು ಹೋಗುವುದು.

3) ಒಳ್ಳೇಯ ಸ್ವಭಾವ ಕಳಕೊಳ್ಳುವುದು.

4) ದೇವರ ಕೃಪೆ ತಪ್ಪಿ ಹೋಗುವದು.

5) ಹಳೆಯ ಜೀವಿತಕ್ಕೆ ತಿರುಗಿ ಹೋಗುವುದು.

6) ಸತ್ಯ ಮಾರ್ಗ ಬಿಟ್ಟು ತಪ್ಪಾದ ಮಾರ್ಗ ಅನುಸರಿಸುವುದು.

7) ಜೀವಮಾರ್ಗದಿಂದ ನಾಶನ ಮಾರ್ಗಕ್ಕೆ ಹೋಗುವುದು.

7) **ಆತ್ಮೀಕ ನಿದ್ರೆ (ಹಿಂಜಾರುವಿಕೆಯ ಅರ್ಥ)** (ಯೆಶಾ. 57:2)

1) ಆತ್ಮೀಕ ಸ್ವಸ್ಥತೆ ಕಳಕೊಳ್ಳುವುದು.

2) ಆತ್ಮೀಕ ಬೆಳವಣಿಗೆ ಇಲ್ಲದಿರುವುದು.

3) ಆತ್ಮೀಕ ಪ್ರಜ್ಞೆ ಕಳಕೊಳ್ಳುವುದು.

4) ಇತರರು ಆತ್ಮೀಕವಾಗಿ ಬೆಳೆಯುವಾಗ ತಾವು ಬೆಳವಣಿಗೆ ಇಲ್ಲದವರಾಗಿರುವುದು.

5) ಆತ್ಮೀಕ ಚಟುವಟಿಕೆ ಇಲ್ಲದ ಜೀವಿತ.

6) ಆತ್ಮೀಕದಲ್ಲಿ ಆಸಕ್ತಿ ಇಲ್ಲದಿರುವುದು (ಕಳಕೊಳ್ಳುವುದು).

7) ಆತ್ಮೀಕ ಅಭ್ಯಾಸ ಇಲ್ಲದ ಜೀವಿತ.

8) **ಕ್ರಿಸ್ತನೊಂದಿಗೆ ಸಂಚರಿಸುವುದನ್ನು ಬಿಡುವದು (ಹಿಂಜಾರುವಿಕೆಯ ಅರ್ಥ)** (ಯೋಹಾ.6:66)

1) ವಾಕ್ಯದ ಪ್ರಕಾರವಾದ ಜೀವಿತ ಬಿಡುವುದು.

2) ಶಿಲುಬೆಯ ಜೀವಿತ ಬಿಡುವುದು.

3) ಪರಿಶುದ್ಧವಾದ ಜೀವಿತ ಬಿಡುವುದು.

4) ಪ್ರಾರ್ಥನಾ ಜೀವಿತ ಬಿಡುವುದು.

5) ಕ್ರಿಸ್ತನ ಪ್ರೀತಿ ಬಿಟ್ಟು ಬಿಡುವುದು.

6) ಕ್ರಿಸ್ತನಿಗಾಗಿ ನಿಲ್ಲುವುದನ್ನು ಬಿಡುವುದು.

7) ಸುಲಭವಾದ ರಾಜಿಯ ಮಾರ್ಗದಲ್ಲಿ ನಡೆಯುವದು.

9) **ಭಕ್ತಿಹೀನತೆ** (2 ತಿಮೊ. 2:16).

1) ಸ್ವಲ್ಪ ಸ್ವಲ್ಪ ಭಕ್ತಿಕಳಕೊಳ್ಳುವುದು.

2) ಆತ್ಮೀಕ ಚಟುವಟಿಕೆಗಳನ್ನು ಬಿಟ್ಟು ಬಿಡುವುದು.

3) ಪರಿಶುದ್ಧತೆ ಕಳಕೊಳ್ಳುವುದು.

4) ಭಕ್ತಿ ಕಾರ್ಯಗಳನ್ನು ಬಿಡುವುದು.

5) ಸಹೋದರರ ಅನ್ಯೋನ್ಯತೆ ಬಿಟ್ಟು ಬಿಡುವುದು.

6) ದೇವರಲ್ಲಿ ಆಸಕ್ತಿ ಕಡಿಮೆಯಾಗುವುದು.

7) ದೇವರ ಭಯಭಕ್ತಿ ಬಿಟ್ಟು ಬಿಡುವುದು.

10) ಕ್ರಿಸ್ತ ನಂಬಿಕೆಯಲ್ಲಿ ಬಿದ್ದುಹೋಗುವುದು (1 ತಿಮೊ. 4:1)

1) ಕ್ರಿಸ್ತನ ಮೇಲಿರುವ ನಂಬಿಕೆ ಕಳಕೊಳ್ಳುವುದು.

2) ಅಸ್ಥಿವಾರ ಉಪದೇಶಗಳ ಮೇಲಿನ ನಂಬಿಕೆ ಬಿಟ್ಟು ಬಿಡುವದು.

3) ಕ್ರಿಸ್ತೀಯ ಬೋಧನೆಯನ್ನು ತಳ್ಳಿಬಿಡುವುದು.

4) ದೈವೀಕ ಉಪದೇಶದ ಮೇಲಿರುವ ನಂಬಿಕೆ ಬಿಟ್ಟು ಬಿಡುವುದು.

5) ಸತ್ಯ ಬೋಧನೆಯನ್ನು ತೊರೆಯುವುದು.

6) ಆಧಾರವಿಲ್ಲದ ಸುಳ್ಳುಗಳ ಮೇಲೆ ನಂಬಿಕೆ ಇಡುವುದು.

7) ಸತ್ಯೋಪದೇಶಗಳನ್ನು ಅಲ್ಲಗಳೆಯುವುದು.

**II) ಹಿಂಜಾರುವಿಕೆಯ ಕಾರಣಗಳು :–**

1) ಅವಿಧೇಯತೆ (ಯಾಜ. 26:14–15).

2) ತಿರುಗಿ ಮೂರ್ಖತನದಲ್ಲಿ ಬೀಳುವುದು (ಕೀರ್ತ. 85:8).

3) ಡೊಂಕಾದ ದಾರಿ ಹಿಡಿಯುವದು (ಕೀರ್ತ. 125:5).

4) ಸೂಳೆತನ (ಯೆಹೆ. 23:35).

5) ಉಪ್ಪು ಸಪ್ಪಗಾಗುವುದು (ಮತ್ತಾ. 5:13).

6) ಹೆಚ್ಚಾದ ಅಧರ್ಮ (ಮತ್ತಾ. 24:12).

7) ಕರ್ತನನ್ನು ಮರೆಯುವುದು (ಧರ್ಮೋ. 8:11).

8) ದೇವರನ್ನು ಬಿಟ್ಟು ಬಿಡುವುದು (ಧರ್ಮೋ. 32:15, 2 ಪೂರ್ವ. 15:2).

9) ನಿಷಿದ್ಧಾಚಾರಗಳನ್ನು ನಡೆಸುವುದು (ಧರ್ಮೋ. 32:16).

ಆತನು ಒಬ್ಬನಿಂದಲೇ, ಎಲ್ಲಾ ಜನಾಂಗದವರನ್ನು ಹುಟ್ಟಿಸಿ, ಅವರವರು ಇರತಕ್ಕ ಕಾಲಗಳನ್ನು ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿರುವೆನು (ಅ.ಕೃ. 17:26).

10) ಶಿಷ್ಯತನ ಬಿಡುವುದು (ಯೆಹೆ. 3:20, 18:16–24, 33:17–18).

11) ಮೇಲಕ್ಕೆತ್ತುವವರು ಯಾರು ಇಲ್ಲದ ಕಾರಣ (ಹೋಶೆ. 11:7, ಯಾಕೋ. 5:19–20, ಯೋಬ. 6:14).

12) ವಾಕ್ಯದಲ್ಲಿ ಬೇರಿಲ್ಲದ ಕಾರಣ (ಮಾರ್ಕ. 4:17).

13) ಶೋಧನೆಯಲ್ಲಿ ಬೀಳುವ ಕಾರಣ (ಲೂಕ. 8:13).

14) ಪ್ರಪಂಚದ ಚಿಂತೆ, ಐಶ್ವರ್ಯದಿಂದುಂಟಾಗುವ ಮೋಸ (ಮಾರ್ಕ. 4:18–19).

15) ದೇವರ ವಾಕ್ಯಕ್ಕೂ ದೇವರಿಗೂ ನಾಚಿಕೊಳ್ಳುವುದು (ಮಾರ್ಕ. 8:38).

16) ಲೋಕಕ್ಕೆ ಹಿಂದಕ್ಕೆ ನೋಡುವುದು, ಲೋಕದ ಆಕರ್ಷಣೆ (ಲೂಕ. 9:62).

17) ತಿರುಗಿ ಮಲೀನತ್ವದಲ್ಲಿ ಬೀಳುವುದು (2 ಪೇತ್ರ. 2:20).

18) ಕೆಟ್ಟ ವಿಷಯಗಳನ್ನು ಆಶಿಸುವುದು (1 ಕೊರಿ. 10:6).

19) ವಿಗ್ರಹಾರಾಧನೆ ಮಾಡುವುದು (1 ಕೊರಿ. 10:7).

20) ಜಾರತ್ವ ಮಾಡುವುದು (1 ಕೊರಿ. 10:8).

21) ಕರ್ತನನ್ನು ಪರೀಕ್ಷಿಸುವುದು (1 ಕೊರಿ. 10:9).

22) ದೇವರಿಗೆ ವಿರುದ್ಧವಾಗಿ ಗುಣುಗುಟ್ಟುವುದು (1 ಕೊರಿ. 10:10).

23) ಪೂರ್ವ ಪಾಪಗಳಿಗೆ ಪಶ್ಚಾತ್ತಾಪ ಪಡದಿರುವುದು (1 ಕೊರಿ. 12:20–21),

24) ತಪ್ಪಾದ ಉಪದೇಶಗಳಿಗೆ ತಿರುಗಿಕೊಳ್ಳುವುದು (1 ತಿಮೊ. 4:1, ಗಲಾ. 1:6–9, ಎಫೆ. 4:14–16).

25) ಮರುಳುಗೊಳ್ಳುವುದು (ಗಲಾ. 3:1, ಪ್ರಕ. 12:9, 13:14).

26) ಕರ್ಮ ಮಾರ್ಗಗಳಿಂದ ನೀತಿವಂತರಾಗಲು ಪ್ರಯತ್ನಿಸುವುದು (ಗಲಾ. 5:4).

27) ಪುನಃಲೋಕದ ಸಂಪ್ರದಾಯಗಳಿಗೆ ಅಧೀನರಾಗುವುದು (ಗಲಾ. 4:9, 5:1, 6:1).

28) ದಾರಿ ಬಿಟ್ಟು ಸೈತಾನನನ್ನು ಹಿಂಬಾಲಿಸುವುದು (1 ತಿಮೊ. 5:15).

29) ಹಣದಾಶೆ (1 ತಿಮೊ. 6:10).

30) ಅಪನಂಬಿಕೆ (ಇಬ್ರಿ. 3:12).

31) ಮೊದಲ ಭರವಸೆ ಬಿಟ್ಟು ಬಿಡುವುದು (ಇಬ್ರಿ. 3:12–13).

32) ಅವಿಧೇಯರಾಗುವುದು (ಇಬ್ರಿ. 4:11).

33) ಭ್ರಷ್ಟರಾಗುವುದು (ಇಬ್ರಿ. 6:4–9, 10:26–29).

34) ವಿಷದ ಬೇರು ಚಿಗುರುವುದು (ಇಬ್ರಿ. 12:15).

35) ಹಿಂದಣ ಪಾಪಗಳು ಕ್ಷಮಿಸಲ್ಪಟ್ಟಿರುವುದನ್ನು ಮರೆಯುವುದು (2 ಪೇತ್ರ. 1:9).

36) ಕರ್ತನ ಸಂಬಂಧವಾದ ಪರಿಜ್ಞಾನ ಹೊಂದದಿರುವುದು (2 ಪೇತ್ರ. 1:8).

37) ಕರೆಯ ಬಗ್ಗೆ ತಿಳಿಯದಿರುವುದು (2 ಪೇತ್ರ. 1:10).

38) ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅತಿಕ್ರಮಿಸುವುದು (2 ಯೋಹಾ. 1:9).

39) ಫಲಕೊಡದ, ವಾಕ್ಯದಲ್ಲಿ ನೆಲೆಗೊಳ್ಳದ ಜೀವಿತ (ಯೋಹಾ. 15:1–8).

40) ಮೊದಲ ಪ್ರೀತಿಯಲ್ಲಿ ಬಿದ್ದು ಹೋಗುವದು [(ಪ್ರಕ. 2:2–5).

41) ಅಪನಂಬಿಕೆಯುಳ್ಳ ಕೆಟ್ಟ ಹೃದಯ (ಯೆರೆ. 17:9, ಇಬ್ರಿ. 3:12).

42) ಅಧರ್ಮಿಗಳ ಭ್ರಾಂತಿಗೆ ಸಿಕ್ಕಿಕೊಳ್ಳುವುದು (2 ಪೇತ್ರ. 3:17).

43) ದೇವರ ದಯೆಯನ್ನು ಆಶಿಸದೇ ಇರುವುದು (ರೋಮ. 11:22).

44) ಒಳ್ಳೆ ಮನಸ್ಸಾಕ್ಷಿ ಬಿಟ್ಟು ಬಿಡುವುದು (1 ತಿಮೊ. 1:19).

45) ಅತ್ಯಂತ ವಿಶೇಷ ರಕ್ಷಣೆಯನ್ನು ಅಲಕ್ಷ ಮಾಡುವುದು (ಇಬ್ರಿ. 2:1–5).

46) ಶರೀರದ ಮೇಲೆ ಹತೋಟಿ ತಪ್ಪುವುದು (1 ಕೊರಿ. 9:27, ಜ್ಞಾನೋ. 25:28).

47) ಕ್ರಿಸ್ತನಲ್ಲಿರುವ ಯಥಾರ್ಥತ್ವವನ್ನು ಪಾತಿವ್ರತ್ಯವನ್ನು ಕೆಡಿಸಿಕೊಳ್ಳುವುದು (2 ಕೊರಿ. 11:2–3).

48) ಅಸ್ಥಿವಾರದಲ್ಲಿ ನಿಲ್ಲದಿರುವುದು (ಕೊಲೊ. 1:23).

49) ಸ್ವೇಚ್ಛೆಯಾಗಿ ಜೀವಿಸುವುದು (ರೋಮ. 2:7–8).

ಭಯಪಡಬೇಡ ನಾನು ನಿನ್ನನ್ನು ವಿಮೋಚಿಸಿದೆನಲ್ಲಾ,
ನಿನ್ನ ಹೆಸರು ಹಿಡಿದು ಕರೆದೆನಲ್ಲಾ ನೀನು ನನ್ನವನೇ (ಯೆಶಾ. 43:1).

50) ಬೋಧನೆ ಕೇಳಿ ಹಿಂಜಾರುವುದು (ಯೋಹಾ. 6:66–68).

51) ದೇವರ ಮಾತನ್ನು ಮೀರುವುದು (ವಿಮೋ. 32:33).

52) ಸಹೋದರರನ್ನು ದ್ವೇಷಿಸುವುದು (1 ಯೋಹಾ. 3:15).

53) ಪಾಪದಲ್ಲಿ ಜೀವಿಸುವುದು (ರೋಮ. 6:14–23, 6:1–2).

54) ಎಚ್ಚರಿಸುವ ಪ್ರವಾದಿಗಳನ್ನು ಅಸಡ್ಡೆ ಮಾಡುವುದು (ನೆಹೆ. 9:26).

55) ಯೆಹೋವನನ್ನು ಆಶ್ರಯಿಸದೆ ಯೆಹೋವನ ಮಾರ್ಗ ಬಿಡುವುದು (ಚೆಫ. 1:6).

56) ದೇವರ ಸಾನಿಧ್ಯ ಬಿಟ್ಟು ಹೋಗುವುದು (ಯೆರೆ. 8:5).

57) ಮೊಂಡುತನ (ಹೋಶೆ. 4:16).

58) ದೇವರಿಗೆ ಕಿವಿಗೊಡದೆ ಸ್ವಂಥ ಹೃದಯದ ಪ್ರಕಾರ ಜೀವಿಸುವುದು (ಯೆರೆ. 7:24).

59) ಪುಣ್ಯ ಕಾರ್ಯಗಳ ಮೇಲೆ ಭರವಸೆ ಇಟ್ಟು ಪಾಪ ಮಾಡುವುದು (ಯೆಹೆ. 33:13).

60) ಕೆಟ್ಟತನದ ಮೇಲೆ ಮನಸ್ಸಿಡುವುದು (ಕೀರ್ತ. 66:18).

61) ಲೋಕ ವ್ಯವಹಾರಗಳಲ್ಲಿ ಸಿಕ್ಕಿಕೊಳ್ಳುವುದು (2 ತಿಮೊ. 2:4).

62) ದ್ವೇಷ ಇಟ್ಟುಕೊಳ್ಳುವುದು (1 ಯೋಹಾ. 3:15).

63) ಅವಿಶ್ವಾಸಿಗಳೊಂದಿಗೆ ಇಜ್ಜೋಡಾಗುವುದು (2 ಕೊರಿ. 6:14–17, ಗಲಾ. 2:11).

64) ರಹಸ್ಯ ಪಾಪಗಳಲ್ಲಿ ಸಿಕ್ಕಿಕೊಳ್ಳುವುದು (ಎಫೆ. 5:5–10, ಕೀರ್ತ. 90:8).

65) ತಪ್ಪಾದ ಉಪದೇಶಕ್ಕೆ ಕಿವಿಗೊಡುವುದು.

66) ಯಾವುದೇ ಸಮಸ್ಯೆ ಇಲ್ಲದೆ ಎಲ್ಲವೂ ಸರಿ ಇರುವಾಗ (ಧರ್ಮೋ. 28:47–48).

67) ಸಮಸ್ಯೆ ಬಗೆ ಹರಿದು ಆಶೀರ್ವಾದ ಬರುವಾಗ.

68) ಲೋಕದ ಆಕರ್ಷಣೆ.

69) ಕಷ್ಟಗಳು ಬರುವಾಗ.

70) ವಾಕ್ಯದ ಅಜ್ಞಾನ (ಹೋಶೆ. 4:6).

71) ಪಾಪ.

72) ತಪ್ಪಾದ ಸಹವಾಸ.

73) ದೈವೀಕ ಮತ್ತು ಸಹೋದರರ ಅನ್ಯೋನ್ಯತೆ ಇಲ್ಲದ ಜೀವಿತ (ಜ್ಞಾನೋ. 18:1, 13:20).

74) ದೇವರಲ್ಲಿ ಭಯಭಕ್ತಿ ಇಲ್ಲದಿರುವಾಗ.

75) ಪರಿಶುದ್ಧತೆ ಕಳಕೊಂಡಾಗ.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

**ಡಿಜಿಎಮ್ ಬೇತೇಲ್ ಚರ್ಚ್ ಟ್ರಸ್ಟ್ (ರಿ)**
ಇದರ ವತಿಯಿಂದ ಆರಂಭಗೊಂಡಿರುವ ನೂತನ ಟಿವಿ ಚಾನೆಲ್
**ಆಸರೆ 24X7**
**ಸುವಾರ್ತೆಯೊಂದಿಗೆ ಸಮಾಜ ಸೇವೆ**
*Digital Set Top Box No. 883*
**ಡಿಜಿಎಮ್ ಬಿಸಿ ಟ್ರಸ್ಟ್ (ರಿ),** ಬೇತೇಲ್ ಚರ್ಚ್ ರಸ್ತೆ, ಇನ್ನಂಜೆ ಗ್ರಾಮ,
ಯೇಸುಪುರ, ಶಂಕರಪುರ, ಉಡುಪಿ – 574115, ಕರ್ನಾಟಕ.
ದೂರವಾಣಿ ಸಂಖ್ಯೆ: 9902334941, 9844265602, 0820 2559202, 0820 2589070

ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ (ಫಿಲಿ. 3:14).

**ವಿಶೇಷ ಸೂಚನೆ**

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್
## ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ


**0091 820 2002781, 0091 9902334941**

---




# ನಮ್ಮೊಂದಿಗೆ ಆಚರಿಸಿ





ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ

ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.



**ಮಕ್ಕಳ ಸ್ವರ**

1) ಇಸ್ರಾಯೇಲನು ಎಂಬ ಹೆಸರು ಯಾರಿಗೆ ಬಂತು?

2) ಮೊಟ್ಟ ಮೊದಲನೆಯದಾಗಿ ದೇಹ ಸಹಿತವಾಗಿ ಮೇಲಕ್ಕೆತ್ತಲ್ಪಟ್ಟ ವ್ಯಕ್ತಿಯ ಹೆಸರೇನು?

3) ದೇವರು ಅಬ್ರಹಾಮನಿಗೆ ಯಾವ ದೇಶವನ್ನು ವಾಗ್ದಾನ ಮಾಡಿದನು?

4) ಮೆತೂಷಹೇಲನು ಜೀವಿಸಿದ ಅವಧಿ ಎಷ್ಟು ?

5) ಮೋಶೆ ಸಾಯುವಾಗ ಎಷ್ಟು ಪ್ರಾಯದವನಾಗಿದ್ದನು?

6) ನೀವು ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ ಎಂದು ಹೇಳಿದವರು ಯಾರು?

7) ಮೆಫೀಬೋಶೆತನು ಏನಾಗಿದ್ದನು?

8) ಸೂರ್ಯನ ನೆರಳಿನ ಗಡಿಯಾರ ಹೊಂದಿದ್ದ ರಾಜ ಯಾರು?

9) ಮೀನಿನ ಬಾಯಲ್ಲಿ ನಾಣ್ಯವನ್ನು ನೋಡಿದವರು ಯಾರು?

10) ಯಾವ ಸ್ತ್ರೀ ನ್ಯಾಯಾಧೀಶಳಾಗಿದ್ದಳು?

**ಜನವರಿ ಮತ್ತು ಫೆಬ್ರವರಿ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1) ಯೆಹೋಶುವ
2) ದೇವರು ಸಮುವೇಲನಿಗೆ ಹೇಳಿದನು
3) ಕತ್ತೆ
4) ಉಪ್ಪುನೀರಳೆ ಅಂಜೂರದ ಮರ
5) ಪಟ್ಟಣ ಅಥವಾ ಪರ್ವತ
6) ಯೋಸೇಫ್, ಸಂಸೋನ, ಪೌಲ
7) ರೆಬೆಕ್ಕ ಮತ್ತು ಸಾರ
8) ಎಲೀಯ, ಯೆರೆಮೀಯ, ಯೋನ
9) ಯೋಬ
10) ಸ್ನಾನಿಕನಾದ ಯೋಹಾನನಿಂದ.

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

ನಿನ್ನ ರಕ್ಷಣಾನಂದವನ್ನು ನಾನು ತಿರುಗಿ ಅನುಭವಿಸುವಂತೆ ಮಾಡು;
ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು (ಕೀರ್ತ. 51:12).